# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶುಕ್ರವಾರ, ಜನವರಿ 15, 2021

ಸಂಪುಟ : 47 ಸಂಚಿಕೆ : 256 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ನಾಳೆ ದೇಶದ 3 ಲಕ್ಷ ಜನರಿಗೆ ಲಸಿಕೆ

### ಕೊರೊನಾ ಲಸಿಕೆಗಾಗಿ ದೇಶಾದ್ಯಂತ 2,934 ತಾಣಗಳು ಸಜ್ಜು

ನವದೆಹಲಿ, ಜ. 14 - ನಾಳೆ ಜನವರಿ 16ರ ಶನಿವಾರದಿಂದ ದೇಶಾದ್ಯಂತ ಲಸಿಕೆ ನೀಡುವ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು. ಮೊದಲ ದಿನದಂದು 2,934 ತಾಣಗಳ ಮೂಲಕ ಸುಮಾರು 3 ಲಕ್ಷ ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡುವ ಉದ್ದೇಶವಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಪ್ರತಿಯೊಂದು ಕೇಂದ್ರದಲ್ಲಿ ಗರಿಷ್ಠ 100 ಜನರಿಗೆ ಲಸಿಕೆ ನೀಡಬಹುದಾಗಿದೆ. ಆದರೆ, ಪ್ರತಿದಿನ ಅಸಾಧಾರಣ ಸಂಖ್ಯೆಯಲ್ಲಿ ಲಸಿಕೆ ನೀಡಲು ಮುಂದಾಗಬಾರದು ಎಂದು ಕೇಂದ್ರ ಆರೋಗ್ಯ ಸಚಿವಾಲಯವು ರಾಜ್ಯಗಳಿಗೆ ಸಲಹೆ ನೀಡಿದೆ.

ಪ್ರತಿದಿನ 100 ಜನರಿಗೆ ಲಸಿಕೆ ನೀಡಬಹುದು. ಈ ಸಂದರ್ಭದಲ್ಲಿ ಶೇ.10ರಷ್ಟು ಲಸಿಕೆ ಕಾಯ್ದಿರಿಸಲ್ಪಡುವ ಇಲ್ಲವೇ ಪೋಲಾಗುವ ಸಾಧ್ಯತೆ ಇರುತ್ತದೆ ಎಂದು ಸಚಿವಾಲಯ ಹೇಳಿದೆ.

ಹೀಗಾಗಿ ರಾಜ್ಯಗಳು ಅಕಾರಣವಾಗಿ ಪ್ರತಿ ಕೇಂದ್ರದಲ್ಲಿ ಹೆಚ್ಚಿನ ಸಂಖ್ಯೆಯ ಲಸಿಕೆ ನೀಡಲು ಮುಂದಾಗಬಾರದು. ದಿನ ಕಳೆದಂತೆ ಲಸಿಕಾ ಕೇಂದ್ರಗಳನ್ನು ಹೆಚ್ಚಿಸಬಹುದು ಎಂದು ತಿಳಿಸಲಾಗಿದೆ.

ಮೊದಲ ದಿನ ದೇಶಾದ್ಯಂತ 2,934 ಕೇಂದ್ರಗಳ ಮೊದಲ ದಿನ 3 ಲಕ್ಷ ಮುಂಚೂಣಿ ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡುವ ನಿರೀಕ್ಷೆ ಇದೆ ಎಂದು ಮೂಲಗಳು ಹೇಳಿವೆ.

ದೇಶದಲ್ಲೀಗ ಆಕ್ಸ್‌ಫರ್ಡ್ (4ನೇ ಪುಟಕ್ಕೆ)

### ನಗರಕ್ಕೆ ತಲುಪಿದ 13,500 ಕೊವಿಶೀಲ್ಡ್ ಲಸಿಕೆ

ದಾವಣಗೆರೆ, ಜ. 14 - 13,500 ಕೊರೊನಾ ಲಸಿಕೆಗಳು ನಗರಕ್ಕೆ ತಲುಪಿವೆ. ಮೊದಲ ಸುತ್ತಿನಲ್ಲಿ ಇವುಗಳನ್ನು ಆರೋಗ್ಯ ಕಾರ್ಯಕರ್ತರು ಹಾಗೂ ಮುಂಚೂಣಿ ಕಾರ್ಯಕರ್ತರಿಗೆ ನೀಡಲಾಗುವುದು.

ಬ್ರಿಟನ್‌ನ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ ರೂಪಿಸಿರುವ ಹಾಗೂ ಸೆರಮ್ ಇನ್‌ಸ್ಟಿಟ್ಯೂಟ್ ಉತ್ಪಾದಿಸಿರುವ ಲಸಿಕೆ ಇವಾಗಿವೆ.

ನಗರಕ್ಕೆ ತಲುಪಿರುವ 13,500 ಡೋಸ್ ಲಸಿಕೆಗಳನ್ನು ಪೊಲೀಸ್ ಭದ್ರತೆ ಹಾಗೂ ಸುರಕ್ಷತೆಯ ನಡುವೆ ಜಿಲ್ಲಾ ಕೇಂದ್ರ ಸಂಗ್ರಹಗಾರದಲ್ಲಿ ಇರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ಈ ಸಂಗ್ರಹಗಾರದ ಮೂಲಕ ಲಸಿಕಾ ಕೇಂದ್ರಗಳಿಗೆ ಲಸಿಕೆಯನ್ನು ರವಾನಿಸಲಾಗುವುದು. ಲಸಿಕೆ ನೀಡಲು ಜಿಲ್ಲೆಯಲ್ಲಿ ಈಗಾಗಲೇ ಆರೋಗ್ಯ ಕಾರ್ಯಕರ್ತರ ಹೆಸರುಗಳನ್ನು ಲಸಿಕೆ ನೀಡಲು ರೂಪಿಸಲಾಗಿರುವ ಆನ್‌ಲೈನ್ ತಂತ್ರಾಂಶವಾದ ಕೊವಿನ್‌ನಲ್ಲಿ ಅಳವಡಿಕೆ ಮಾಡಲಾಗಿದೆ. ಕಳೆದ ಜ.8ರಂದು ಜಿಲ್ಲೆಯ ಆರು ಕೇಂದ್ರಗಳಲ್ಲಿ ಲಸಿಕೆ ನೀಡುವ ತಾಲೀಮು ಸಹ ನಡೆಸಲಾಗಿತ್ತು. ನಾಳೆ ಜ.16ರ ಶನಿವಾರದಿಂದ ದೇಶದೆಲ್ಲೆಡೆ ಲಸಿಕೆ ನೀಡುವುದಕ್ಕೆ ಚಾಲನೆ ನೀಡಲಾಗುವುದು.



## ನಾನು - ನೀವು ಬೇರೆಯಲ್ಲ

### ಸದಾ ನಿಮ್ಮೊಂದಿಗಿದ್ದೇನೆ: ಹರ ಜಾತ್ರಾ ಮಹೋತ್ಸವದಲ್ಲಿ ಯಡಿಯೂರಪ್ಪ

ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ

ಹರಿಹರ, ಜ. 14- ನಾನು-ನೀವು ಬೇರೆಯಲ್ಲ. ಸದಾ ನಿಮ್ಮೊಂದಿಗಿದ್ದೇನೆ. ಬಸವಾದಿ ಶರಣರ ಕನಸಿನ ಸಮ ಸಮಾಜ ನಿರ್ಮಿಸುವ ಕಾರ್ಯದಲ್ಲಿ ನಾವೆಲ್ಲಾ ಮುಂದಾಗೋಣ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪಂಚಮಸಾಲಿ ಸಮಾಜಕ್ಕೆ ಕರೆ ನೀಡಿದರು.

ಹರಿಹರದ ಹೊರ ವಲಯದಲ್ಲಿರುವ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ಹಮ್ಮಿಕೊಂಡಿದ್ದ 2ನೇ ವರ್ಷದ ಹರಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಶ್ರೀಮಠ ಸಮಬಾಳು-ಸಮಪಾಲು ಎಂಬ ಧ್ಯೇಯವನ್ನು ಪಾಲಿಸುತ್ತಿದೆ. ಶ್ರೀ ವಚನಾನಂದ ಸ್ವಾಮೀಜಿ ಅವರ ಮುಂದಾಳತ್ವದಲ್ಲಿ ಕಲ್ಯಾಣ ಕಾರ್ಯಗಳನ್ನು ರೂಪಿಸುತ್ತಿದೆ. ಶ್ರೀಗಳು ಅಧ್ಯಾತ್ಮ ಹಾಗೂ ಯೋಗ ವಿದ್ಯೆಯನ್ನು ವಿಶ್ವದಾದ್ಯಂತ ಪಸರಿಸಿ, ಇದೀಗ ಸಮಾಜದ ಶೈಕ್ಷಣಿಕ, ಆರ್ಥಿಕ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದರು.

ಸ್ವಾಭಿಮಾನ, ಸ್ವಾವಲಂಬನೆ, ಸಹಕಾರ, (4ನೇ ಪುಟಕ್ಕೆ)

**ಹರ ಜಾತ್ರಾ ಸಮಾವೇಶ ಉದ್ಘಾಟನೆ ನಂತರ ವಚನಾನಂದ ಸ್ವಾಮೀಜಿ ಹಾಗೂ ಮುಖ್ಯಮಂತ್ರಿ ಯಡಿಯೂರಪ್ಪನವರು ಪರಸ್ಪರ ಎಳ್ಳು ಬೆಲ್ಲ ತಿನ್ನಿಸಿದರು. ಎಳ್ಳು ಬೆಲ್ಲ ತಿಂದು ಎಳ್ಳು ಬೆಲ್ಲದಂತೆಯೇ ಇರೋಣ ಎಂದು ಶ್ರೀಗಳು ಹೇಳಿದರು.**

### ಮೀಸಲಾತಿ ನೀಡುವ ಭರವಸೆ ಇದೆ: ಶ್ರೀ

ಹರಿಹರ, ಜ. 14- ಮುಖ್ಯಮಂತ್ರಿ ಯಡಿಯೂರಪ್ಪನವರು ಪಂಚಮಸಾಲಿ ಸಮಾಜಕ್ಕೆ 2 ಎ ಮೀಸಲಾತಿ ಸೌಲಭ್ಯ ಕಲ್ಪಿಸುವ ಭರವಸೆ ನಮಗಿದೆ. ಸೂಕ್ತ ಸಮಯದಲ್ಲಿ ಕುರಿತು ನಿರ್ಣಯ ತೆಗೆದುಕೊಳ್ಳುವ ನಂಬಿಕೆ ಇದೆ ಎಂದು ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಹೇಳಿದರು. ಹರ ಜಾತ್ರಾ ಮಹೋತ್ಸವದಲ್ಲಿ ಆಶೀರ್ವಚನ ನೀಡಿದ ಶ್ರೀಗಳು, (4ನೇ ಪುಟಕ್ಕೆ)

### ಪಂಚಮಸಾಲಿ ಮಠಕ್ಕೆ 10 ಕೋಟಿ ರೂ.

ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಮಠದ ಅಭಿವೃದ್ಧಿಗೆ ಹಣದ ನೆರವು ಕೇಳಿದಾಗ 10 ಕೋಟಿ ರೂ.ಗಳನ್ನು ಮಂಜೂರು ಮಾಡಿದ್ದೇನೆ. ನಾಲ್ಕೈದು ದಿನಗಳಲ್ಲಿ ಹಣವನ್ನು ಮಠದ ಖಾತೆಗೆ ವರ್ಗಾಯಿಸಲಾಗುತ್ತದೆ. ಶ್ರೀಗಳು ಈ ಹಣವನ್ನು ಸದ್ವಿನಿಯೋಗ ಮಾಡಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಹೇಳಿದರು.

### ಪಾದಯಾತ್ರೆ ಪರಿಹಾರವಲ್ಲ, ಕೈಬಿಡಿ: ನಿರಾಣಿ

ಕೂಡಲ ಸಂಗಮದ ಶ್ರೀ ಜಯ ಮೃತ್ಯುಂಜಯ ಸ್ವಾಮೀಜಿ ಅವರು ಮೀಸಲಾತಿಗಾಗಿ ಪಾದಯಾತ್ರೆ ಕೈಗೊಂಡಿರುವುದನ್ನು ಕೈ ಬಿಡುವಂತೆ ಸಚಿವ ಮುರುಗೇಶ ನಿರಾಣಿ ಮನವಿ ಮಾಡಿದರು.

ಪಾದಯಾತ್ರೆಯೇ ಎಲ್ಲದಕ್ಕೂ ಪರಿಹಾರವಲ್ಲ. ಮೀಸಲಾತಿಗಾಗಿ ಉಪ ಸಮಿತಿ ರಚಿಸಿ, ಸಾಧಕ-ಬಾಧಕಗಳನ್ನು ಚರ್ಚಿಸಿ, ಮೀಸಲಾತಿ ನೀಡುವ ಭರವಸೆಯನ್ನು ಮುಖ್ಯಮಂತ್ರಿಗಳು ನೀಡಿದ್ದಾರೆ. ಆದ್ದರಿಂದ ಶ್ರೀಗಳು ಪಾದಯಾತ್ರೆ ಕೈ ಬಿಟ್ಟು, ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕು ಎಂದರು.

## ಸುಪ್ರೀಂ ಕೋರ್ಟ್ ರೈತರ ಸಮಿತಿಯಿಂದ ಭೂಪಿಂದರ್ ಹಿಂದೆ

ಚಂಡೀಘಡ, ಜ. 14 - ನೂತನ ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ರೈತರು ಹಾಗೂ ಕೇಂದ್ರ ಸರ್ಕಾರದ ನಡುವಿನ ಬಿಕ್ಕಟ್ಟು ನಿವಾರಿಸುವ ಸಲುವಾಗಿ ಸುಪ್ರೀಂ ಕೋರ್ಟ್ ರಚಿಸಿರುವ ನಾಲ್ವರು ಸದಸ್ಯರ ಸಮಿತಿಯಿಂದ ಭಾರತೀಯ ಕಿಸಾನ್ ಯೂನಿಯನ್ ಅಧ್ಯಕ್ಷ ಭೂಪಿಂದರ್ ಸಿಂಗ್ ಮಾನ್ ಹಿಂದೆ ಸರಿದಿದ್ದಾರೆ.

ಮಾನ್ ಈ ಹಿಂದೆ ಕೃಷಿ ಕಾಯ್ದೆಗಳ ಪರವಾಗಿ ನಿಲುವು ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಅವರು ಸಮಿತಿಯಲ್ಲಿ ಇರುವುದರ ಬಗ್ಗೆ ಪ್ರತಿಭಟನಾ ನಿರತ ರೈತ ಸಂಘಟನೆಗಳು ಹಾಗೂ ಪ್ರತಿಪಕ್ಷಗಳು ಆಕ್ಷೇಪಿಸಿದ್ದವು.

ಸುಪ್ರೀಂ ಕೋರ್ಟ್ ತಮ್ಮನ್ನು ಸಮಿತಿಗೆ ನೇಮಿಸಿರುವ (2ನೇ ಪುಟಕ್ಕೆ)

## 2ನೇ ದಿನ ಪೆಟ್ರೋಲ್ ಬೆಲೆ ಹೆಚ್ಚಳ

ನವದೆಹಲಿ, ಜ. 14 - ಸತತ ಎರಡನೇ ದಿನ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳನ್ನು ಏರಿಕೆ ಮಾಡಲಾಗಿದೆ. ಗುರುವಾರ ತೈಲ ಬೆಲೆಯನ್ನು 25 ಪೈಸೆಯಷ್ಟು ಹೆಚ್ಚಿಸಲಾಗಿದೆ. ತೈಲ ಮಾರುಕಟ್ಟೆ ಕಂಪನಿಗಳ ಮಾಹಿತಿಯ ಪ್ರಕಾರ ದೆಹಲಿಯಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 84.70 ರೂ. ಆಗಿದ್ದರೆ, ಡೀಸೆಲ್ ಬೆಲೆ ಲೀಟರ್‌ಗೆ 74.88 ರೂ. ಆಗಿದೆ.

ದೆಹಲಿಯಲ್ಲಿ ಪೆಟ್ರೋಲ್ ಬೆಲೆ ಹೊಸ ದಾಖಲೆಯಾಗಿದೆ. ಮುಂಬೈನಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 91.32 ರೂ. ಆಗಿದೆ. ಈ (2ನೇ ಪುಟಕ್ಕೆ)







# ಯುವ ಸಮೂಹ ಟಿ.ವಿ. ಮೊಬೈಲ್ ದಾಸ್ಯದಿಂದ ಹೊರ ಬರಬೇಕು




**ಹರಪನಹಳ್ಳಿ : ಸಂಕ್ರಾಂತಿ ಕಾರ್ಯಕ್ರಮದಲ್ಲಿ ಎಂ.ಪಿ.ಲತಾ ಮಲ್ಲಿಕಾರ್ಜುನ ಕರೆ**

ಹರಪನಹಳ್ಳಿ, ಜ.14- ಯುವ ಸಮೂಹ ಟಿ.ವಿ. ಮೊಬೈಲ್‌ಗಳ ದಾಸ್ಯದಿಂದ ಹೊರಗೆ ಬರಬೇಕಾಗಿದೆ. ಸುಸಂಸ್ಕೃತ ಭಾಷೆಯ ಪ್ರಯೋಗ ತಾಲ್ಲೂಕಿನಲ್ಲಿ ಅವಶ್ಯವಾಗಿದೆ ಎಂದು ರಾಜ್ಯ ಕಾಂಗ್ರೆಸ್ ಮಹಿಳಾ ಕಾರ್ಯದರ್ಶಿ ಎಂ.ಪಿ. ಲತಾ ಮಲ್ಲಿಕಾರ್ಜುನ ಹೇಳಿದರು.

ತಾಲ್ಲೂಕಿನ ಕಡತಿ ಹಾಗೂ ನಂದ್ಯಾಲ ಬಳಿ ಇರುವ ತುಂಗಭದ್ರಾ ನದಿ ದಡದಲ್ಲಿ 3ನೇ ವರ್ಷದ ಮಕರ ಸಂಕ್ರಾತಿ ಹಬ್ಬವನ್ನು ಎಳ್ಳು, ಬೆಲ್ಲ ಸೇರಿ ಸಾಮೂಹಿಕ ರೊಟ್ಟಿ ಊಟದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಮುಖವಾಗಿ ಸಂಕ್ರಾಂತಿ ಹಬ್ಬ ಚಳಿಗಾಲ ಮುಗಿಸಿ ಬೇಸಿಗೆ ಕಾಲಕ್ಕೆ ಪಾದಾರ್ಪಣೆ ಮಾಡುವ ಕಾಲ. ಈ ಹಬ್ಬದಲ್ಲಿ ಎಳ್ಳು ಬೆಲ್ಲ ಹಂಚಿ ಆಚರಣೆ ಮಾಡುವುದರಲ್ಲಿ ವೈಜ್ಞಾನಿಕ ಮಹತ್ವ ವಿದೆ. ಹಿರಿಯ ಸಂಪ್ರದಾಯಗಳನ್ನು ಉಳಿಸಿ, ಬೆಳೆಸಲು ಇಂತಹ ಹಬ್ಬ ಹರಿ-ದಿನಗಳನ್ನು ಸಾಮೂಹಿಕವಾಗಿ ಆಚರಣೆ ಮಾಡೋಣ. ಜಾತಿ ಮತಗಳ ಬೇಧವಿಲ್ಲದೇ ಒಟ್ಟಾಗಿ ಊಟ ಸವಿಯುವ ಮೂಲಕ ಸಾಮರಸ್ಯ ಬೆಸೆಯುವುದೇ ಇದರ ಉದ್ದೇಶ ಎಂದರು.

ರವಿ ಯುವ ಶಕ್ತಿ ಪಡೆ ಅಧ್ಯಕ್ಷ ಮಾಗಾನಹಳ್ಳಿ ಉದಯಶಂಕರ್ ತಾಲ್ಲೂಕು ಪಂಚಾಯ್ತಿ ಸದಸ್ಯ ಗೌಡ್ರ ಮಂಜುಳಾ ಜಗದೀಶ್, ಹಲುವಾಗಲು ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷರಾದ ರತ್ನಮ್ಮ ಸೋಮಪ್ಪ, ತಾಲ್ಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷ ಎಚ್. ರಾಜಪ್ಪ, ಪುರಸಭೆ ಸದಸ್ಯರುಗಳಾದ ಎಂ.ವಿ. ಅಂಜಿನಪ್ಪ, ಗೊಂಗಡಿ ನಾಗರಾಜ, ಉದ್ದಾರ ಗಣೇಶ, ಮುಖಂಡರಾದ ಬಿ.ಕೆ.ಪ್ರಕಾಶ, ಮಲ್ಲಿಕಾರ್ಜುನ, ಮೈದೂರು ರಾಮಣ್ಣ, ಇಜಾರಿ ಮಹಾವೀರ, ಇಟ್ಟಿಗುಡಿ ಚನ್ನಬಸಪ್ಪ, ಹಲವಾಗಲು ಕರಿಯಪ್ಪ, ಕಂಚಿಕೇರಿ ಜಯಲಕ್ಷ್ಮಿ, ಜಗದೀಶಗೌಡ್ರು, ಚಿಕ್ಕೇರಿ ಬಸಪ್ಪ, ಕುಂಚೂರು ಇಬ್ರಾಹಿಂ, ಸಾಸ್ವಿಹಳ್ಳಿ ನಾಗರಾಜ, ಎಚ್. ವಸಂತಪ್ಪ, ಹುಲಿ ರಮೇಶ, ಶೃಂಗಾರ ತೋಟದ ಅಶೋಕ, ಉಮಾಶಂಕರ, ಕವಿತಾ ಸುರೇಶ, ಎನ್.ಟಿ. ಸೋಮಣ್ಣ, ಹಲುವಾಗಲು, ನಾರಾಯಣ, ಮತ್ತೂರು ಬಸವರಾಜ, ವೃಷಭೇಂದ್ರ ಇನ್ನಿತರರಿದ್ದರು.

# ಹರಿಹರಕ್ಕೆ ಇಂದು ಸಿದ್ದರಾಮಯ್ಯ




ಶ್ರೀ ರಾಘವೇಂದ್ರ ಮಠದ ಸಮುದಾಯ ಭವನದಲ್ಲಿ ಹರಿಹರ ನಗರ ಮತ್ತು ಮಲೇಬೆನ್ನೂರು ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಗ್ರಾ.ಪಂ. ಮತ್ತು ನಗರಸಭೆ ಸದಸ್ಯರಾಗಿ ಚುನಾಯಿತರಾಗಿರುವ ಕಾಂಗ್ರೆಸ್ ಬೆಂಬಲಿತ ಎಲ್ಲಾ ಸದಸ್ಯರುಗಳಿಗೆ ಇಂದು ಬೆಳಿಗ್ಗೆ 12 ಗಂಟೆಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಸನ್ಮಾನ ಹಾಗೂ ಅಭಿನಂದನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಶಾಸಕ ಎಸ್.ರಾಮಪ್ಪ ಅಧ್ಯಕ್ಷತೆ ವಹಿಸಲಿದ್ದಾರೆಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಎಲ್.ಬಿ. ಹನುಮಂತಪ್ಪ, ಎಂ.ಬಿ.ಅಬೀದ್ ಅಲಿ ತಿಳಿಸಿದ್ದಾರೆ. ನಂತರ ಮಧ್ಯಾಹ್ನ 3.30ಕ್ಕೆ ಹರಿಹರದ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ನಡೆಯುತ್ತಿರುವ ಹರ ಜಾತ್ರಾ ಮಹೋತ್ಸವದಲ್ಲಿ ಶ್ರೀ ವಚನಾನಂದ ಸ್ವಾಮೀಜಿ ಅವರ ತೃತೀಯ ಪೀಠಾರೋಹಣ ಕಾರ್ಯಕ್ರ ಮದಲ್ಲಿ ಸಿದ್ದರಾಮಯ್ಯ, ಎಂ.ಬಿ.ಪಾಟೀಲ್, ಶಿವಾನಂದ ಪಾಟೀಲ್, ಎಸ್.ರಾಮಪ್ಪ, ಲಕ್ಷ್ಮಿ ಹೆಬ್ಬಾಳಕರ್, ಪಿ.ಟಿ.ಪರಮೇಶ್ವರ ನಾಯ್ಕ, ಭೀಮಾ ನಾಯ್ಕ, ಕೆ.ಗೋವಿಂದ ರಾಜು, ಮಾಹಿಮಾ ಪಟೇಲ್, ಸಿರಿಗೆರೆ ನಾಗನಗೌಡ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಲಿದ್ದಾರೆ. ಬಾವಿ ಬೆಟ್ಟಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

# ಲಿಂಗಾಯತ ಸಮಾಜಕ್ಕೆ ಕೇಂದ್ರ ಒಬಿಸಿ ಸೌಲಭ್ಯ ನೀಡಬೇಕು

**ಚಿದಾನಂದ ಕಂಚಿಕೇರಿ**




**ಹರ ಜಾತ್ರಾ ಮಹೋತ್ಸವದಲ್ಲಿ ಸಚಿವ ಬಿ.ಸಿ. ಪಾಟೀಲ್**

ಹರಿಹರ, ಜ.14- ದೇಶದಲ್ಲಿ ಲಿಂಗಾಯತ ಸಮಾಜದವರು ಬಹಳ ಕಡಿಮೆ ಪ್ರಮಾಣದಲ್ಲಿ ಇರುವುದರಿಂದ ಕೇಂದ್ರ ಸರ್ಕಾರವು ರಾಜ್ಯದ ಲಿಂಗಾಯತ ಸಮುದಾಯಕ್ಕೆ ಒಬಿಸಿ ಸೌಲಭ್ಯಗಳನ್ನು ನೀಡಬೇಕಾಗಿದೆ ಎಂದು ರಾಜ್ಯ ಕೃಷಿ ಸಚಿವ ಬಿ.ಸಿ. ಪಾಟೀಲ್ ಹೇಳಿದರು.

ನಗರದ ಪಂಚಮಸಾಲಿ ಗುರುಪೀಠದ ಆವರಣದಲ್ಲಿ ಹರ ಜಾತ್ರಾ ಮಹೋತ್ಸವದ ನಿಮಿತ್ತವಾಗಿ ಇಂದು ಮಧ್ಯಾಹ್ನ ನಡೆದ ಭೂ ತಪಸ್ವಿ ಸಮಾವೇಶದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

ರಾಜ್ಯದ ಲಿಂಗಾಯತ ಸಮಾಜದವರು ಶೇ 90 ರಷ್ಟು ಕೃಷಿಯನ್ನು ಅವಲಂಬಿಸಿದ್ದಾರೆ. ಆದ್ದರಿಂದ ರೈತರು ಆಧುನಿಕ ಕೃಷಿ ಪದ್ಧತಿ ಮತ್ತು ವೈಜ್ಞಾನಿಕ ಕೃಷಿ ಪದ್ಧತಿ ಹಾಗೂ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಹೋದಾಗ ರೈತರ ಬದುಕು ಉತ್ತಮ ರೀತಿಯಲ್ಲಿ ಬೆಳವಣಿಗೆ ಹೊಂದುತ್ತದೆ. ರಾಜ್ಯದ ಪಂಚಮಸಾಲಿ ಸಮಾಜವು ಆರ್ಥಿಕವಾಗಿ, ಶೈಕ್ಷಣಿಕವಾಗಿ ಪ್ರಗತಿ ಹೊಂದುತ್ತಿರುವ ಸಮಾಜವಾಗಿದೆ ಎಂದು ಹೇಳಿದರು.

ಶಾಸಕ ಶಾಮನೂರು ಶಿವಶಂಕರಪ್ಪ ಅವರು ಭೂ ತಪಸ್ವಿ ಸಮಾವೇಶ ಉದ್ಘಾಟನೆ ಮಾಡಿ ಮಾತನಾಡಿ, ದೇಶದ ಬೆನ್ನೆಲುಬು ರೈತರು ಅಂತ ಹೇಳುತ್ತಾರೆ. ಆದರೆ ರೈತರ ಪರಿಸ್ಥಿತಿ ಬಹಳ ಅಧೋಗತಿಯತ್ತ ಸಾಗುತ್ತಿದೆ. ಸರಿಯಾದ ಸಮಯದಲ್ಲಿ ಮಳೆ ಇಲ್ಲದೆ ಮತ್ತು ಸಮಯವಲ್ಲದ ಸಮಯದಲ್ಲಿ ಹೆಚ್ಚಾಗಿ ಮಳೆ ಬಂದು ರೈತರ ಜೀವನವನ್ನು ದುಸ್ತರ ಸ್ಥಿತಿಗೆ ತಂದು ನಿಲ್ಲಿಸಿದೆ ಎಂದರು.

ಬೆಳೆ ಹಾಳಾದ ಸಂದರ್ಭದಲ್ಲಿ ಅದಕ್ಕೆ ತಕ್ಕಂತೆ ಸರ್ಕಾರದಿಂದ ಪರಿಹಾರ ಸಿಗದೆ ಇರುವುದು ಸಹ ರೈತರು ಸಂಕಷ್ಟ ಅನುಭವಿಸಲು ಕಾರಣ, ಕೇಂದ್ರ ಸರ್ಕಾರ ಎಪಿಎಂಸಿ ಸೇರಿದಂತೆ ಅನೇಕ ಕಾಯ್ದೆಗಳನ್ನು ತಿದ್ದುಪಡಿ ಮಾಡಲಿಕ್ಕೆ ಹೊರಟಿದ್ದರಿಂದ ಅದನ್ನು ತಡೆಗಟ್ಟಲು ರೈತರು ಸಾಕಷ್ಟು ಹರಸಾಹಸ ಮಾಡಬೇಕಾದ ಪರಿಸ್ಥಿತಿ ಬಂದಿತು ಎಂದರು.

ಲಿಂಗಾಯತ ಸಮಾಜದ ಒಳ ಪಂಗಡದ ಎಲ್ಲಾ ಮಠಾಧೀಶರು ಒಟ್ಟಿಗೇ ಕುಳಿತು ಚರ್ಚೆ ಮಾಡಿದಾಗ ಮಾತ್ರ ವೀರಶೈವ ಲಿಂಗಾಯತ ಸಮಾಜದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ ಮತ್ತು ಸಮಾಜದಲ್ಲಿನ ಜನರೂ ಸಹ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ದಿಕ್ಸೂಚಿ ಭಾಷಣದಲ್ಲಿ ಧಾರವಾಡ ಶಾಸಕ ಅರವಿಂದ ಬೆಲ್ಲದ ಮಾತನಾಡಿ, ನಾಡಿನಲ್ಲಿ ಬಹುಸಂಖ್ಯೆಯಲ್ಲಿ ಇರುವ ಪಂಚಮಸಾಲಿ ಸಮುದಾಯಕ್ಕೆ 4 ಮಂತ್ರಿಗಳ ಭಾಗ್ಯ ದೊರೆಯಬೇಕು ಎಂದರು.

ಪದವಿ ಪಡೆದವರು ಪಂಚಮಸಾಲಿ ಸಮಾಜದ ಕೆಳವರ್ಗದ ಜನರನ್ನು ಮೇಲೆ ತರುವ ಕೆಲಸವನ್ನು ಮಾಡಬೇಕು. ಪಂಚಮಸಾಲಿ ಸಮಾಜದ ಗುರುಗಳು ತಮ್ಮ ಸಮಾಜದವರು ಬರಿ ಮಂತ್ರಿ ಆಗಲಿ ಎಂಬ ಬಗ್ಗೆ ಆಸಕ್ತಿ ತೋರಿಸುವುದಕ್ಕಿಂತ ಕೆಳ ಹಂತದಲ್ಲಿ ಇರುವಂತಹ ಸಮಾಜದ ಜನರಿಗೆ ಶಿಕ್ಷಣ, ಸಂಸ್ಕಾರ, ನೀಡಿದಾಗ ಅದರಿಂದ ಹೆಚ್ಚು ಗೌರವ ಬರುತ್ತದೆ ಎಂದರು.

ಹಿಂದೆ ಪಂಚಮಸಾಲಿ ಸಮಾಜದ ಎಸ್. ನಿಜಲಿಂಗಪ್ಪ, ಜೆ.ಹೆಚ್. ಪಟೇಲ್ ಸೇರಿದಂತೆ, ಅನೇಕ ಮಹಾನ್ ವ್ಯಕ್ತಿಗಳು ಅವರಿಗೆ ಇದ್ದ ಸಮಾಜದ ಕಳಕಳಿ, ಸತ್ಯ, ನಿಷ್ಠೆ, ಶುದ್ಧ ಹಸ್ತ, ಇವುಗಳಿಂದ ರಾಜ್ಯ ಮತ್ತು ದೇಶದಲ್ಲಿ ಹೆಸರನ್ನು ಗಳಿಸಿದರು. ಅದರಂತೆ ಇಂದಿನ ಯುವಕರು ಅವರಂತೆ ಸತ್ಯ, ನಿಷ್ಠೆ ಶ್ರದ್ಧೆಯಿಂದ ಪ್ರಗತಿಯನ್ನು ಕಾಣಬೇಕು ಎಂದರು.

'ಪಂಚವಾಣಿ' ಮಾಸ ಪತ್ರಿಕೆಯನ್ನು ಬಿಡುಗಡೆ ಮಾಡಿದ ಬೃಹತ್ ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ಮಾತನಾಡಿ, ಭಾರತ ದೇಶವು ಸಂಸ್ಕೃತಿ ಮತ್ತು ಸಂಸ್ಕಾರ, ಪರಂಪರೆಗಳಿಂದ ಜಗತ್ತಿಗೇ ಮಾದರಿ ದೇಶವಾಗಿದೆ. ಇದನ್ನು ಇಷ್ಟು ವರ್ಷಗಳ ಕಾಲ ಉಳಿಸಿಕೊಂಡು ಮತ್ತು ಬೆಳೆಸಿಕೊಂಡು ಹೋಗಲಿಕ್ಕೆ ಎಲ್ಲಾ ಮಠಾದೀಶ್ವರರು ಕಾರಣ. ಪಂಚಮಸಾಲಿ ಸಮಾಜ ಒಗ್ಗಟ್ಟಾಗಿ ಇದ್ದರೆ ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಸಾಧ್ಯ. ಆ ನಿಟ್ಟಿನಲ್ಲಿ ಸಮಾಜದ ಎಲ್ಲರೂ ಸಾಗುವಂತಾಗಲಿ ಎಂದು ಹೇಳಿದರು.

ಇಳಕಲ್ ಚಿತ್ತರಗಿ ಸಂಸ್ಥಾನ ಮಠದ ಶ್ರೀ ಗುರು ಮಹಾಂತ ಶಿವಯೋಗಿಗಳು, ಹಾವೇರಿ ಹುಕ್ಕೇರಿ ಮಠದ ಶ್ರೀ ಸದಾಶಿವ ಸ್ವಾಮೀಜಿ, ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಮಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಸಮಾರಂಭದ ಸಾನ್ನಿಧ್ಯ ವಹಿಸಿದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ಪಂಚಮಸಾಲಿ ಸಮಾಜದ ರಾಜ್ಯಾಧ್ಯಕ್ಷ ಬಿ. ನಾಗನಗೌಡ್ರು ವಹಿಸಿದ್ದರು. ಈ ಸಂದರ್ಭದಲ್ಲಿ ಗಣಿ ಮತ್ತು ಭೂ ವಿಜ್ಞಾನ ಸಚಿವ ಸಿ.ಸಿ. ಪಾಟೀಲ್, ಬಳ್ಳಾರಿ ಸಂಸದ ವೈ. ದೇವೇಂದ್ರಪ್ಪ, ಬಸವರಾಜ್ ದಿಂಡೂರು, ಶಾಸಕ ಅರುಣ್ ಕುಮಾರ್ ಪೂಜಾರ್ ಮತ್ತು ಇತರರು ಹಾಜರಿದ್ದರು.

# ಆಸ್ತಿ ತೆರಿಗೆ ಏರಿಕೆಗೆ ಕಾಂಗ್ರೆಸ್ ಆಕ್ರೋಶ

ಬೆಂಗಳೂರು, ಜ. 14 - ರಾಜ್ಯದಲ್ಲಿ ಆಸ್ತಿ ತೆರಿಗೆ ಏರಿಕೆ ಮಾಡಿರುವುದನ್ನು ತರಾಟೆಗೆ ತೆಗೆದುಕೊಂಡಿರುವ ರಾಜ್ಯ ಕಾಂಗ್ರೆಸ್, ಬಿಜೆಪಿಯ ರಾಜ್ಯ ಸರ್ಕಾರ ಜನರನ್ನು ನಿರ್ದಯವಾಗಿ ದೋಚುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದೆ.

ನಗರ ಪ್ರದೇಶಗಳಲ್ಲಿ ಆಸ್ತಿ ತೆರಿಗೆ ಏರಿಕೆ ಮಾಡಿರುವುದರ ಬಗ್ಗೆ ಟ್ವೀಟ್ ಮಾಡಿರುವ ರಾಜ್ಯ ಕಾಂಗ್ರೆಸ್, ಈ ಕ್ರಮ ಜನಸಾಮಾನ್ಯರ ಮೇಲಿನ ಭೀಕರ ಹಲ್ಲೆ ಎಂದು ಆರೋಪಿಸಿದೆ.

ಬಿಜೆಪಿಯ ಎಡಬಿಡಂಗಿ ನಿರ್ಧಾರಗಳಾದ ನೋಟ್ ಬ್ಯಾನ್, ಅವೈಜ್ಞಾನಿಕ ಜಿಎಸ್‌ಟಿ, ಲಾಕ್‌ಡೌನ್‌ಗಳಿಂದ ಜನತೆ ಆದಾಯ ಕಳೆದುಕೊಂಡಿದ್ದಾರೆ.

ಇದರ ನಡುವೆಯೇ, ತೈಲ ಬೆಲೆ ಏರಿಕೆ, ಅಗತ್ಯ ವಸ್ತುಗಳ ಬೆಲೆ ಏರಿಕೆ ಹಾಗೂ ಆಸ್ತಿ ತೆರಿಗೆ ಏರಿಕೆಗಳಿಂದ ರಾಜ್ಯ ಬಿಜೆಪಿ ಸರ್ಕಾರ ನಿರ್ದಯವಾಗಿ ಜನರನ್ನು ದೋಚುತ್ತಿದೆ ಎಂದು ಕಾಂಗ್ರೆಸ್ ತರಾಟೆಗೆ ತೆಗೆದುಕೊಂಡಿದೆ.

# ರೈತರ ಸಮಿತಿಯಿಂದ ಭೂಪಿಂದರ್ ಹಿಂದೆ

**(1ನೇ ಪುಟದಿಂದ)** ಬಗ್ಗೆ ಧನ್ಯವಾದ ಸಲ್ಲಿಸಿರುವುದಾಗಿ ಹೇಳಿರುವ ಮಾನ್, ರೈತರ ಹಿತಕ್ಕೆ ತೊಂದರೆಯಾಗುವುದನ್ನು ತಡೆಯಲು ತಮ್ಮ ಸ್ಥಾನ ಬಿಟ್ಟು ಕೊಡುತ್ತಿರುವುದಾಗಿ ಹೇಳಿದ್ದಾರೆ.

ನಾನು ಸ್ವತಃ ರೈತ ಹಾಗೂ ಕಾರ್ಮಿಕ ಸಂಘಟನೆ ನಾಯಕ. ರೈತ ಒಕ್ಕೂಟಗಳು ಹಾಗೂ ಸಾರ್ವಜನಿಕರಲ್ಲಿರುವ ಭಾವನೆ ಹಾಗೂ ಕಳವಳಗಳನ್ನು ಪರಿಗಣಿಸಿ ಸ್ಥಾನವನ್ನು ಬಿಟ್ಟುಕೊಡುತ್ತಿದ್ದೇನೆ ಎಂದವರು ತಿಳಿಸಿದ್ದಾರೆ.

ಮಾನ್ ಅಲ್ಲದೇ ಶೆಟ್ಕಾರಿ ಸಂಘಟನೆಯ ಅಧ್ಯಕ್ಷ ಅನಿಲ್ ಘನ್ವತ್, ಆಹಾರ ನೀತಿಯ ಪರಿಣಿತ ಪ್ರಮೋದ್ ಕುಮಾರ್ ಜೋಷಿ ಹಾಗೂ ಕೃಷಿ ಆರ್ಥಿಕತೆ ಪರಿಣಿತ ಅಶೋಕ್ ಗುಲಾಟಿ ಅವರು ಸಮಿತಿಯ ಇತರೆ ಸದಸ್ಯರು.

# ಕೊಟ್ಟೂರಿನಲ್ಲಿ ಸಿದ್ದರಾಮೇಶ್ವರ ಜಯಂತಿ



ಕೊಟ್ಟೂರು, ಜ.14 - ಜಯಂತಿಗಳು ಒಂದು ದಿನದ ಆಚರಣೆಗೆ ಮಾತ್ರ ಸೀಮಿತವಾಗದೇ ನಿತ್ಯ ಜೀವನಕ್ಕೆ ಮಾರ್ಗದರ್ಶನವಾಗಬೇಕು ಹಾಗೂ ಅವರು ನೀಡಿದ ಸಂದೇಶ ಪಾಲಿಸಬೇಕು. ಆಗಲೇ ಜಯಂತಿಗಳಿಗೆ ಅರ್ಥ ಬರುತ್ತದೆ ಎಂದು ತಹಶೀಲ್ದಾರ್ ಜಿ. ಅನಿಲ್ ಕುಮಾರ್ ಅವರು ತಿಳಿಸಿದರು.

ತಾಲ್ಲೂಕು ಕಛೇರಿಯ ಮಹಾತ್ಮ ಗಾಂಧಿ ಸಭಾಂಗಣದಲ್ಲಿ ಇಂದು ಏರ್ಪಡಿಸಿದ್ದ ಸಿದ್ದರಾಮೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ಒಬ್ಬರ ಮನವ ನೋಯಿಸಿ ಒಬ್ಬರ ಮನೆಯ ಘಾತವ ಮಾಡಿ ಗಂಗೆಯ ಮುಳುಗಿದಡೇನಾವುದಯ್ಯ' ಎಂದು ಹೇಳಿರುವ ಸಿದ್ದರಾಮೇಶ್ವರರು, ಇನ್ನೊಬ್ಬರ ಮನವ ನೋಯಿಸದಂತೆ ನಡೆಯಬೇಕೆಂದು ನೀಡಿರುವ ಸಂದೇಶ ಇಂದಿಗೂ ಪ್ರಸ್ತುತ ಎಂದು ತಿಳಿಸಿದರು.

ಯುವ ಮುಖಂಡ ಇಂದ್ರಜಿತ್ ಮಾತನಾಡಿ, ಭೋವಿ ಜನಾಂಗದವರು ಶಿಕ್ಷಣವಂತರಾಗಬೇಕು. ಆ ಮೂಲಕ ಸರ್ಕಾರದ ಸೌಲಭ್ಯಗಳನ್ನು ಪಡೆದು ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಮುಂಚೂಣಿಗೆ ಬರಬೇಕೆಂದರು

ವೇದಿಕೆಯಲ್ಲಿ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಪಿ. ಎಚ್.ಆರ್ ರಾಘವೇಂದ್ರ, ಗ್ರಾ.ಪಂ ಸದಸ್ಯರಾದ ಡಿ. ನಾಗೇಶ್ ಮುಖಂಡರಾದ ದೊಡ್ಡಮನಿ ಚೌಡಪ್ಪ, ರವಿಕುಮಾರ್, ಶಿರಸ್ತೇದಾರರಾದ ಲೀಲಾ, ಕಂದಾಯ ನಿರೀಕ್ಷಕ ಹಾಲಸ್ವಾಮಿ, ರವಿ, ಸುನೀತಾ, ಮಂಜುನಾಥ್ ಇದ್ದರು. ಸಿ.ಮ. ಗುರುಬಸವರಾಜ ಕಾರ್ಯಕ್ರಮ ನಿರೂಪಿಸಿದರು.


# ಒಂಭತ್ತನೇ ವರ್ಷದ ಪುಣ್ಯಸ್ಮರಣೆ





ನಿಧನ : 15.01.2012

**ಡಾ॥ ಹೆಚ್.ವಿ. ನಾಯ್ಕ,** M.B.B.S.,

**ಸಂಸ್ಥಾಪಕರು, ನವೋದಯ ಆಸ್ಪತ್ರೆ**

ಸಾಯಿ ನಿವಾಸ, ಎಂ.ಸಿ.ಸಿ. "ಎ" ಬ್ಲಾಕ್, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಒಂಭತ್ತು ವರ್ಷಗಳಾದವು
ನಿಮ್ಮ ಆದರ್ಶಗಳೇ ನಮಗೆ ದಾರಿದೀಪ. ನೀವು ಹಾಕಿಕೊಟ್ಟ ಸನ್ಮಾರ್ಗದಲ್ಲೇ
ನಡೆಯುತ್ತಾ ಸದಾ ನಿಮ್ಮ ಸ್ಮರಣೆಯಲ್ಲಿರುವ....

**ಪತ್ನಿ : ಶ್ರೀಮತಿ ಪದ್ಮಾವತಿ ನಾಯ್ಕ**
**ತಮ್ಮ: ಸೇವಾನಾಯ್ಕ, ಮಕ್ಕಳು, ಅಳಿಯಂದಿರು, ಸೊಸೆಯಂದಿರು**
**ಮೊಮ್ಮಕ್ಕಳು ಮತ್ತು ಸಿಬ್ಬಂದಿ ವರ್ಗ.**

✻ ನವೋದಯ ಆಸ್ಪತ್ರೆ ✻ ನವೋದಯ ಮೆಡಿಕಲ್ & ಜನರಲ್ ಸ್ಟೋರ್
✻ ಶ್ರೀ ನವೋದಯ ಮೆಡಿಕಲ್ಸ್ ✻ ನಾಯ್ಕ ನರ್ಸಿಂಗ್ ಹೋಂ
✻ ಬಾಲಾಜಿ ಎಂಟರ್‌ಪ್ರೈಸಸ್, ಫಾರ್ಮಾಸ್ಯೂಟಿಕಲ್ & ಸರ್ಜಿಕಲ್ ಡಿಸ್ಟ್ರಿಬ್ಯೂಟರ್ಸ್
✻ ಶ್ರೀ ನವೋದಯ ಆಗ್ರೋ ಫುಡ್ ಪ್ರೊಸೆಸಿಂಗ್ ಇಂಡಸ್ಟ್ರಿಯಲ್ ಕಾರ್ಪೊರೇಷನ್.


## ನಗರದಲ್ಲಿ ಇಂದು ಉದ್ಯೋಗ ಶಿಬಿರ

ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ ಮತ್ತು ಜಿಲ್ಲಾ ಪಂಚಾಯತ್ ಸಂಯುಕ್ತಾಶ್ರಯದಲ್ಲಿ ರೇಷ್ಮೆ ಇಲಾಖೆ ಆವರಣದಲ್ಲಿ ಮಹಿಳೆಯರಿಗೆ ಹೊಲಿಗೆ ತರಬೇತಿ, ಹೈನುಗಾರಿಕೆ ಮತ್ತು ಎರೆಹುಳು ಗೊಬ್ಬರ ಸಾಕಾಣಿಕೆ, ಸಣ್ಣ ಉದ್ದಿಮೆದಾರರಿಗೆ ಉದ್ಯಮ ಶೀಲತಾ ತರಬೇತಿಯು ಇಂದಿನಿಂದ ನಡೆಯಲಿದೆ. ಗ್ರಾಮೀಣ ಬಿಪಿಎಲ್ ಅಭ್ಯರ್ಥಿ ಗಳು ಅರ್ಜಿ ಸಲ್ಲಿಸಬಹುದಾಗಿದೆ. ವಿವರಕ್ಕೆ ಸಂಪರ್ಕಿಸಿ : ಮೊ: 9481977076, 7259731172.

## ಹರಿಹರದಲ್ಲಿಂದು ವಿದ್ಯುತ್ ವ್ಯತ್ಯಯ

ಜೀಜಾಮಾತಾ ಕಾಲೋನಿ, ಚಿಂತಾಮಣಿ ನಗರ, ಆಶ್ರಯ ಕಾಲೋನಿ, ಚಿಂತಾಮಣಿ ನಗರ, ಆಶ್ರಯ ಕಾಲೋನಿ, ಕೆ.ಆರ್. ನಗರ, ವಿಜಯ ನಗರ, ಟಿಪ್ಪೂ ನಗರ, ಕೇಶವ ನಗರ, ಗಾಂಧಿ ನಗರ, ಭರಂಪುರ, ಬಸ್‌ಸ್ಟ್ಯಾಂಡ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.



## ಉಕ್ಕಡಗಾತ್ರಿಯಲ್ಲಿ ಸಂಭ್ರಮದ ಸಂಕ್ರಾಂತಿ

ಸುಕ್ಷೇತ್ರ ಉಕ್ಕಡಗಾತ್ರಿಯ ತುಂಗಭದ್ರಾ ನದಿ ತಟದಲ್ಲಿ ಮಕರ ಸಂಕ್ರಾಂತಿ ಹಬ್ಬವನ್ನು ಜನರು ಗುರುವಾರ ಸಂಭ್ರಮದಿಂದ ಆಚರಿಸಿದರು. ರಾಜ್ಯದ ನಾನಾ ಭಾಗಗಳಿಂದ ಸಾವಿರಾರು ಸಂಖ್ಯೆಯಲ್ಲಿ ಇಲ್ಲಿಗೆ ಆಗಮಿಸಿದ್ದ ಜನರು, ತುಂಗಭದ್ರಾ ನದಿಯಲ್ಲಿ ಪುಣ್ಯ ಸ್ನಾನ ಮಾಡಿ, ಗಂಗಾ ಪೂಜೆ ನೆರವೇರಿಸಿದರು. ನಂತರ ಪವಾಡ ಪುರುಷ ಶ್ರೀಗುರು ಕರಿಬಸವೇಶ್ವರ ಅಜ್ಜಯ್ಯನ ದರ್ಶನ ಪಡೆದರು. ಮನೆಯಿಂದ ತಯಾರು ಮಾಡಿಕೊಂಡು ಬಂದಿದ್ದ ರೊಟ್ಟಿ, ಬುತ್ತಿ, ಚಟ್ನಿ, ಪಲ್ಯ, ಪಾಯಿಸ, ಹೋಳಿಗೆ ಸೇರಿದಂತೆ ಬಗೆ ಬಗೆಯ ತಿನಿಸುಗಳನ್ನು ನದಿ ದಡದಲ್ಲಿ ಒಟ್ಟಾಗಿ ಕುಳಿತುಕೊಂಡು ಸವಿದು ಸಂಭ್ರಮಿಸಿದರು.


# 2ನೇ ದಿನ ಪೆಟ್ರೋಲ್ ಬೆಲೆ ಹೆಚ್ಚಳ

**(1ನೇ ಪುಟದಿಂದ)** ಹಿಂದೆ ಪೆಟ್ರೋಲ್ ದರ ಮುಂಬೈನಲ್ಲಿ 91.34 ರೂ. ಗಳವರೆಗೂ ತಲುಪಿತ್ತು. ಡೀಸೆಲ್ ಬೆಲೆ ಮುಂಬೈನಲ್ಲಿ ಲೀಟರ್‌ಗೆ 81.60 ರೂ. ಆಗಿದ್ದು, ಇದು ನಗರದ ಮಟ್ಟಿಗೆ ಹೊಸ ದಾಖಲೆಯಾಗಿದೆ.

## ನಗರದಲ್ಲಿಂದು ಯೋಗಾಸನ ತರಬೇತಿ

ಆಚಾರ್ಯ ಯೋಗ ವಿದ್ಯಾಶಾಲೆ ವತಿಯಿಂದ ಉಚಿತ ಯೋಗಾಸನ ತರಬೇತಿ ಶಿಬಿರವು ಆಲೂರ್ ಕನ್ವೆನ್ಷನ್ ಹಾಲ್‌ನಲ್ಲಿ ಇಂದಿನಿಂದ ಇದೇ ದಿನಾಂಕ 17 ರವರೆಗೆ ನಡೆಯಲಿದೆ. ಯೋಗ ಶಿಕ್ಷಕ ಗೋಪಿನಾಥ್ ಅವರು ಶಿಬಿರವನ್ನು ನಡೆಸಿಕೊಡುವರು ಎಂದು ಪುಷ್ಪಾ (90367 19573) ತಿಳಿಸಿದ್ದಾರೆ.

## ರಾಯಪ್ಪರ ಶಿವಪ್ಪ ನಿಧನ



ದಾವಣಗೆರೆ ತಾಲ್ಲೂಕು ದೊಡ್ಡ ಬೂದಿಹಾಳು ಗ್ರಾಮದ ವಾಸಿ

**ರಾಯಪ್ಪರ ಶಿವಪ್ಪ (78)**

ಅವರು ದಿನಾಂಕ 14.01.2021 ರಂದು ಗುರುವಾರ ಸಂಜೆ 5.30ಕ್ಕೆ ನಿಧನರಾಗಿದ್ದಾರೆ. ಪತ್ನಿ, ಐವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 15.01.2021ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ದೊಡ್ಡ ಬೂದಿಹಾಳು ಗ್ರಾಮದದಲ್ಲಿ ನೆರವೇರಲಿದೆ.

**ಇಂತಿ ದುಃಖತಪ್ತ ಕುಟುಂಬ ವರ್ಗದವರು**

**98444 42212, 73377 77272**

## ಎ.ಎಂ. ಬಸವರಾಜಯ್ಯನವರು ನಿಧನ



ದಾವಣಗೆರೆ ಸಿಟಿ, ಆನೆಕೊಂಡದ ನಿವಾಸಿ ದಿ. ಶ್ರೀಮತಿ ಚನ್ನಮ್ಮ ಶ್ರೀ ಎಂ. ಮಹೇಶ್ವರಪ್ಪಯ್ಯನವರ ಸೊಸೆ ಶ್ರೀಮತಿ ಬಸಮ್ಮ ಇವರ ಪತಿ ಶ್ರೀ ಎ.ಎಂ. ಬಸವರಾಜಯ್ಯ (60) ಇವರು ದಿನಾಂಕ 14.01.2021ರ ಗುರುವಾರ ಮಧ್ಯಾಹ್ನ 12.30ಕ್ಕೆ ನಿಧನರಾಗಿರುತ್ತಾರೆ. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುವ ಇವರ ಅಂತ್ಯಕ್ರಿಯೆಯನ್ನು ದಿನಾಂಕ 15.01.2021ರ ಶುಕ್ರವಾರ ಬೆಳಿಗ್ಗೆ 10.00 ಗಂಟೆಗೆ ಮೃತರ ಸ್ವಂತಃ ಆನೆಕೊಂಡದಲ್ಲಿರುವ ಜಮೀನಿನಲ್ಲಿ ನೆರವೇರಿಸಲಾಗುವುದು.

**ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ**

## ಮಲೇಬೆನ್ನೂರಿನಲ್ಲಿ ಇಂದು

ಮಲೇಬೆನ್ನೂರು ಪಟ್ಟಣದ ಪ್ರತಿಷ್ಠಿತ ಶ್ರೀ ನಂದಿ ಸೌಹಾರ್ದ ಸಹಕಾರಿ ನಿಯಮಿತದ ಹೊಸ ಆಡಳಿತ ಮಂಡಳಿಗೆ ನೂತನ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆಗಾಗಿ ಇಂದು ಚುನಾವಣೆ ನಡೆಯಲಿದೆ. ಇದೇ ತಿಂಗಳು 3 ರಂದು ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ನಡೆದಿತ್ತು.

# ಕೊರೊನಾ ನಡುವೆಯೂ ಪರಿಸರದ ಮಡಿಲಿನಲ್ಲಿ ಸಂಕ್ರಾಂತಿ ಸಂಭ್ರಮ





ದಾವಣಗೆರೆ, ಜ.14- ಕೊರೊನಾ ನಡುವೆಯೂ ನಗರದಲ್ಲಿ ಹೊಸ ವರ್ಷದ ಮೊದಲ ಹಬ್ಬವಾದ ಸಂಕ್ರಾಂತಿ ಹಬ್ಬದ ಸಂಭ್ರಮ ಮನೆ ಮಾಡಿತ್ತು. ಪರಿಸರದ ಮಡಿಲಿನಲ್ಲಿ ಕುಟುಂಬಸ್ಥರು, ನೆಂಟರಿಷ್ಟರೊಡಗೂಡಿ ಹಬ್ಬದೂಟದ ಸವಿಯೊಂದಿಗೆ ಹಬ್ಬವನ್ನು ಸಂತಸದಿಂದ ಆಚರಿಸಿದರು.

ಹಬ್ಬಕ್ಕಾಗಿ ಕಬ್ಬಿನ ತುಂಡು, ಎಳ್ಳು-ಬೆಲ್ಲ, ಸಕ್ಕರೆ ಅಚ್ಚುಗಳನ್ನು ದೇವರ ಮುಂದೆ ಇಟ್ಟು ವಿಶೇಷ ಪೂಜೆ ಮಾಡಿದರು. ಬಳಿಕ ಮನೆಯ ಮಂದಿ, ಸಂಬಂಧಿಕರು ಹಾಗೂ ಸ್ನೇಹಿತರಿಗೆ ನೀಡಿ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು. ಒಣ ಕೊಬ್ಬರಿ, ಶೇಂಗಾ, ಹುರಿಗಡಲೆ, ಬೆಲ್ಲದ ಅಚ್ಚುಗಳ ಮಿಶ್ರಣವನ್ನು ಮೆಲ್ಲುತ್ತಾ ಶುಭಾಶಯ ಕೋರಿದರು.

ಹಬ್ಬದ ಸಂಭ್ರಮಾಚರಣೆ ಮುಂದೆ ಕೊರೊನಾ ಭಯ ಮಾಯವಾಗಿತ್ತು. ಜನರು ಕೊರೊನಾವನ್ನು ಲೆಕ್ಕಿಸದೇ ಅದನ್ನು ಮರೆತು ಹಬ್ಬದ ಖುಷಿ ಅನುಭವಿಸಿದರು. ಹಚ್ಚ ಹಸಿರಿನ ಸೌಂದರ್ಯದ ನಡುವೆ ಹಬ್ಬದ ಗುಂಗಿನಲ್ಲಿ ಮಿಂದೆದ್ದರು. ಕೊರೊನಾಗೆ ಸವಾಲೆನಿಸುವಂತೆ ಜನ ಹಬ್ಬವನ್ನಾಚರಿಸಿದರು. ನಗರದ ಕೆಲ ಉದ್ಯಾನವನಗಳಲ್ಲಿ ಜನಜಂಗುಳಿ ಮತ್ತು ಸಾಮಾಜಿಕ ಅಂತರ ಸೇರಿದಂತೆ ಕೊರೊನಾ ಮುಂಜಾಗ್ರತಾ ಕ್ರಮಗಳ ಪಾಲಿಸದೇ ಹಬ್ಬದ ಸಂಭ್ರಮದಲ್ಲಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಖಡಕ್ ರೊಟ್ಟಿ, ಚಪಾತಿ, ಪುಂಡಿ ಸೊಪ್ಪಿನ ಪಲ್ಯ, ಎಣಗಾಯಿ ಪಲ್ಯ, ಚಟ್ನಿ ಪುಡಿ, ಚಿತ್ರನ್ನ, ಸಿಹಿ ಪೊಂಗಲ್, ಮೊಸರನ್ನ ಬುತ್ತಿ ಸೇರಿದಂತೆ ವಿವಿಧ ಬಗೆಯ ಖಾದ್ಯಗಳನ್ನು ಮಾಡಿಕೊಂಡು ಕುಟುಂಬ ಸಮೇತ ಪ್ರವಾಸಿ ತಾಣಗಳು, ಉದ್ಯಾನಗಳಿಗೆ ತೆರಳಿ ಒಟ್ಟುಗೂಡಿ ಭೋಜನ ಸವಿಯುವ ಮೂಲಕ ಸಂಭ್ರಮಿಸಿದರು.

**ಉದ್ಯಾನವನಗಳಲ್ಲಿ ಕಳೆ ಕಟ್ಟಿದ ಸಂಭ್ರಮ:** ಕೆಲವರು ತಮ್ಮ ಊರು, ಬಡಾವಣೆಗಳಿಗೆ ಸಮೀಪ ವಿರುವ ಉದ್ಯಾನವನಗಳಲ್ಲಿ ಹಬ್ಬದ ಸಂಭ್ರಮ ವನ್ನಾಚರಿಸಿದರೆ ಮತ್ತೆ ಕೆಲವರು ಗ್ಲಾಸ್ ಹೌಸ್ ಗೆ ತೆರಳಿ ಹಬ್ಬದ ಖುಷಿಪಟ್ಟರು. ಗಂಡ-ಹೆಂಡತಿ-ಮಕ್ಕಳು, ಸಹೋದರ-ಸಹೋದರಿಯರು ಸೇರಿದಂತೆ ಕುಟುಂಬ ಸಮೇತ ಹಬ್ಬದೂಟ ಸವಿದು ಕೆಲ ಕಾಲ ಮನರಂಜನೆ ಅನುಭವಿಸಿ ವಿರಮಿಸಿದರು. ಜನರು ಬಾಡಿಗೆ ಆಟೋಗಳು, ಸ್ವಂತ ವಾಹನ, ಕಾರು, ಬೈಕ್ ಗಳಲ್ಲಿ ಆಗಮಿಸಿದ್ದು ವಿಶ್ವೇಶ್ವರಯ್ಯ ಉದ್ಯಾನವನ, ಗ್ಲಾಸ್ ಹೌಸ್ ನಲ್ಲಿ ಕಂಡು ಬಂತು.





ಉದ್ಯಾನವನಗಳಲ್ಲಿ ಮಕ್ಕಳ ಆಟೋಟ ಸಂಭ್ರಮ ಕಳೆಕಟ್ಟಿತ್ತು. ಜೋಕಾಲಿ, ಜಾರಬಂಡಿ ಹಾಗೂ ಆಟಿಕೆಗಳು, ಪಾರ್ಕ್ ನಲ್ಲಿರುವ ಜಿಮ್ ಉಪಕರಣಗಳನ್ನು ಉಪಯೋಗಿಸಿ ಸಂತಸಪಟ್ಟರು. ಕೆಲ ಪೋಷಕರು, ಸಾರ್ವಜನಿಕರು ಮಕ್ಕಳ ಸಂಭ್ರಮ ಕಣ್ತುಂಬಿಕೊಂಡರೆ, ಮತ್ತೆ ಕೆಲವರು ಮಕ್ಕಳ ಜೊತೆ ಮಕ್ಕಳಾಗಿ ಆಟೋಟಗಳಲ್ಲಿ ಪಾಲ್ಗೊಂಡು ಸಂತಸಗೊಂಡರು.

ಸರ್ ಎಂ. ವಿಶ್ವೇಶ್ವರಯ್ಯ ಉದ್ಯಾನದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಸಹ ಜನ ಸಂಕ್ರಾಂತಿ ಹಬ್ಬದ ನಿಮಿತ್ತ ನಗರ ಸೇರಿದಂತೆ ಆನೆಕೊಂಡ, ಮಟ್ಟಿಕಲ್ಲು ಹಾಗೂ ವಿವಿಧೆಡೆಗಳಿಂದ ರೊಟ್ಟಿ, ಬುತ್ತಿ ಸೇರಿದಂತೆ ಹಬ್ಬದೂಟವನ್ನು ಕಟ್ಟಿಕೊಂಡು ಬಂದು ಹಸಿರಿನ ನಡುವೆ ಸುಂದರ ವಾತಾವರಣದಲ್ಲಿ ನೆಲದ ಮೇಲೆ ಚಾಪೆ, ಪ್ಲಾಸ್ಟಿಕ್ ಪಾಟ್, ಬೆಡ್ ಶೀಟ್ ಹಾಸಿಕೊಂಡು ಮನೆ ಮಂದಿ, ಕುಟುಂಬವು ಊಟ ಸವಿದದ್ದು ಸಾಮಾನ್ಯವಾಗಿತ್ತು.

ಕಾಸಲ್ ಶ್ರೀನಿವಾಸ ಶ್ರೇಷ್ಠಿ ಉದ್ಯಾನದಲ್ಲಿ ಜನರು ಇದ್ದರಾದರೂ ಹಬ್ಬದ ಸಂಭ್ರಮ ಕಡಿಮೆ ಇತ್ತು. ಮಕ್ಕಳ ಆಟೋಟ ಸಂಭ್ರಮ ಜೋರಾಗಿತ್ತು. ಎಸ್.ನಿಜಲಿಂಗಪ್ಪ ಬಡಾವಣೆಯಲ್ಲಿ ಮಾತ್ರ ಛಾಯಾ ಚಿಣ್ಣರ ಉದ್ಯಾನವನದಲ್ಲಿ ಜನರು ಪ್ರವೇಶ ಶುಲ್ಕ ನೀಡಿ ಹಬ್ಬದ ಸಂಭ್ರಮ ಸವಿಯಬೇಕಾಯಿತು. ನಿಜಲಿಂಗಪ್ಪ ಬಡಾವಣೆಯ ಗಂಗೂಬಾಯಿ ಹಾನಗಲ್ ಉದ್ಯಾನವನದಲ್ಲಿ ಸಹ ಹಬ್ಬದ ಕಳೆ ಕಂಡು ಬಂತು. ಮಕ್ಕಳು ಆಟೋಟದಲ್ಲಿ ಮಿಂದೆದ್ದರು. ಗಂಡ-ಹೆಂಡತಿ-ಮಗು ಆಟದಲ್ಲಿ ತಲೀನರಾಗಿದ್ದು ಕಂಡು ಬಂತು. ಮಕ್ಕಳು ಮರವೇರಿ ಖುಷಿ ಪಟ್ಟರು.

**ಗ್ಲಾಸ್ ಹೌಸ್ ನಲ್ಲಿ ಸಡಗರದ ಸಂಕ್ರಾಂತಿ:** ಗ್ಲಾಸ್ ಹೌಸ್ ನಲ್ಲಿ ಸಂಕ್ರಾಂತಿ ಸಂಭ್ರಮ ಹೆಚ್ಚಾಗಿತ್ತು. ಜನಜಂಗುಳಿಯಿಂದ ಕೂಡಿತ್ತು. ಕುಂದವಾಡ, ಇಂಡಸ್ಟ್ರಿಯಲ್ ಏರಿಯಾ, ನಾಗನೂರು, ಹೊಸ ಕುಂದವಾಡ, ನಾಗೇನಹಳ್ಳಿ ಹೀಗೆ ಅನೇಕ ಕಡೆಗಳಿಂದ ಜನರು ಆಗಮಿಸಿದ್ದರು. ಬೆಳಗ್ಗೆಯಿಂದ ಸಂಜೆವರೆಗೂ ಸುಮಾರು 1500ಕ್ಕೂ ಹೆಚ್ಚು ದೊಡ್ಡವರು, 200ಕ್ಕೂ ಹೆಚ್ಚು ಮಕ್ಕಳು ಆಗಮಿಸಿ ಗ್ಲಾಸ್ ಹೌಸ್ ನ ಪರಿಸರದ ಸೌಂದರ್ಯ ವೀಕ್ಷಿಸಿ ಹಬ್ಬದೂಟವನ್ನು ಸವಿದರು. ಮಕ್ಕಳ ಆಟೋಟ ಸಂಭ್ರಮಕ್ಕೆ ಪಾರವೇ ಇರಲಿಲ್ಲ. ನವ ಜೋಡಿಗಳು ನವ ಸಂಕ್ರಮಣವನ್ನು ಗ್ಲಾಸ್ ಹೌಸ್ ನಲ್ಲಿ ಕಳೆದರು. ಕೆಲ ಕುಟುಂಬಗಳು ಗ್ಲಾಸ್ ಹೌಸ್ ನಿಂದಾಚೆ ಮರದ ನೆರಳಲ್ಲಿ ಹಬ್ಬದ ಸವಿ ಸವೆಯುತ್ತಾ ಸಂಕ್ರಾಂತಿ ಸಂಭ್ರಮಿಸಿದರು.

ಕೊಂಡಜ್ಜಿ ಕೆರೆ, ದೇವರಬೆಳಕೆರೆ ಪಿಕ್ ಅಪ್‌ಗಳಿಗೂ ಭಾರೀ ಸಂಖ್ಯೆಯಲ್ಲಿ ಜನ ಕುಟುಂಬ ಸಮೇತ ತೆರಳಿ ಹಬ್ಬದ ಊಟ ಮಾಡಿದರು.

**ಸೆಲ್ಫಿ-ಗ್ರೂಫಿ ಕ್ರೇಜ್:** ಪೋಷಕರು ತಮ್ಮ ಮಕ್ಕಳ ಸಂಭ್ರಮವನ್ನು ಹಾಗೂ ಯುವಕ-ಯುವತಿಯರು, ಕುಟುಂಬದ ಸದಸ್ಯರು, ನವ ವಧು-ವರರು ಹಬ್ಬದ ಸಂಭ್ರಮದ ಸಂತಸದ ಕ್ಷಣವನ್ನು ತಮ್ಮ ಮೊಬೈಲ್ ನಲ್ಲಿ ಸೆರೆ ಹಿಡಿದರು. ಸೆಲ್ಫಿ ಮತ್ತು ಗ್ರೂಫಿಯಾಗಿ ಛಾಯಾಚಿತ್ರಗಳ ಸೆರೆ ಹಿಡಿಯುವ ಸಡಗರ ವಿಶ್ವೇಶ್ವರಯ್ಯ ಪಾರ್ಕ್, ಗ್ಲಾಸ್ ಹೌಸ್ ನಲ್ಲಿ ಕಂಡುಬಂತು.

**ಕೆರೆಗಳಲ್ಲಿ ಹಬ್ಬದಾಚರಣೆ ನಿಷೇಧ:** ನಗರದ ಟಿವಿ ಸ್ಟೇಷನ್ ಕೆರೆ ಹಾಗೂ ಕುಂದವಾಡ ಕೆರೆಯಲ್ಲಿ ಹಬ್ಬದ ಸಂಭ್ರಮಾಚರಣೆಗೆ ಅವಕಾಶ ನೀಡದೇ ಸಾರ್ವಜನಿಕರ ಪ್ರವೇಶ ನಿಷೇಧಿಸಲಾಗಿತ್ತು. ಹಬ್ಬದೂಟದೊಂದಿಗೆ ಕುಟುಂಬ ಸಮೇತ ಆಗಮಿಸಿ ಸಂಭ್ರಮಿಸುವ ಆಸೆ ಹೊತ್ತು ಬಂದಿದ್ದ ಕೆಲ ಸಾರ್ವಜನಿಕರು ಅವಕಾಶ ನೀಡದೇ ಗೇಟ್ ಗೆ ಬೀಗ ಹಾಕಿದ್ದು ಕಂಡು ವಾಪಸ್ ಬೇರೆ ಕಡೆ ದಾರಿ ಹಿಡಿದಿದ್ದು ಟಿವಿ ಸ್ಟೇಷನ್ ಕೆರೆ ಬಳಿ ಕಂಡು ಬಂತು.

## ಸಿ.ಡಿ. ಬ್ಲಾಕ್‌ಮೇಲ್ : ನ್ಯಾಯಾಂಗ ತನಿಖೆಗೆ ಡಿಕೆಶಿ ಆಗ್ರಹ

ಬೆಂಗಳೂರು, ಜ. 14 - ಸಚಿವ ಸ್ಥಾನಕ್ಕಾಗಿ ಸಿ.ಡಿ. ಬ್ಲಾಕ್ ಮೇಲ್ ಹಾಗೂ ಭ್ರಷ್ಟಾಚಾರ ಮಾಡಲಾಗಿದೆ ಎಂಬ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಆರೋಪದ ಬಗ್ಗೆ ಹೈಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಶಿವಕುಮಾರ್, ಕಾರವಾರದಲ್ಲಿ ಈ ವಿಚಾರವನ್ನು ನಾನು ಮಾತನಾಡಿದ್ದೆ. ಈಗ ಬಿಜೆಪಿ ಮುಖಂಡರೇ ಸಿ.ಡಿ. ಬಗ್ಗೆ ಆರೋಪ ಮಾಡುತ್ತಿದ್ದಾರೆ. ಈ ಕಾರಣದಿಂದಾಗಿ ಇದು ಕ್ರಿಮಿನಲ್ ಪ್ರಕರಣದ ವ್ಯಾಪ್ತಿಯಲ್ಲಿ ಬರುತ್ತದೆ. ಈ ಕೂಡಲೇ ಹೈಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ನಡೆಯಬೇಕು ಎಂದು ಒತ್ತಾಯಿಸಿದರು.

ಎಲ್ಲಾ ತನಿಖಾ ಸಂಸ್ಥೆಗಳು ಸ್ವಯಂಪ್ರೇರಿತವಾಗಿ ದೂರು ದಾಖಲು ಮಾಡಲಿ, ಸತ್ಯಾಂಶ ಹೊರಗಡೆ ಬರಲಿ. ಇದು ಮುಖ್ಯಮಂತ್ರಿಗಳ ಜವಾಬ್ದಾರಿಯಾಗಿದೆ ಎಂದೂ ಅವರು ಆಗ್ರಹಿಸಿದ್ದಾರೆ.

## ಕಾಂಗ್ರೆಸ್ ಬೆಂಬಲಿತ ಗ್ರಾ.ಪಂ. ಸದಸ್ಯರಿಗೆ ನಾಳೆ ಅಭಿನಂದನೆ

ದಾವಣಗೆರೆ, ಜ.14- ದಾವಣಗೆರೆ ಉತ್ತರ-ದಕ್ಷಿಣ ಮತ್ತು ಮಾಯಕೊಂಡ ವಿಧಾನಸಭಾ ಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಕಾಂಗ್ರೆಸ್ ಬೆಂಬಲಿತ ಗ್ರಾಮ ಪಂಚಾಯಿತಿ ನೂತನ ಸದಸ್ಯರಿಗೆ ಅಭಿನಂದನಾ ಸಮಾರಂಭ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶವನ್ನು ನಾಡಿದ್ದು ದಿನಾಂಕ 16ರ ಶನಿವಾರ ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಂದು ಮಧ್ಯಾಹ್ನ 12ಕ್ಕೆ ನಡೆಯುವ ಈ ಸಮಾವೇಶವನ್ನು ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಉದ್ಘಾಟಿಸಲಿದ್ದು, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಮತ್ತಿತರರು ವಹಿಸಲಿದ್ದಾರೆ ಎಂದು ಉತ್ತರ ವಿಧಾನಸಭಾ ಕ್ಷೇತ್ರದ ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಕೆ. ಪರಶುರಾಮ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಒಟ್ಟು 41 ಪಂಚಾಯಿತಿಗಳಿಂದ ದಾವಣಗೆರೆ ಉತ್ತರದಲ್ಲಿ 86 ಜನ, ದಕ್ಷಿಣದಲ್ಲಿ 56 ಹಾಗೂ ಮಾಯಕೊಂಡ ವಿಧಾನಸಭಾ ಕ್ಷೇತ್ರದಲ್ಲಿ 209 ಜನರ ಕಾಂಗ್ರೆಸ್ ಬೆಂಬಲಿತ ಸದಸ್ಯರು ಜಯ ಗಳಿಸಿದ್ದಾರೆ. ಆದರೆ ಬಿಜೆಪಿ ನಾಯಕರು ಹೆಚ್ಚಿನ ಸಂಖ್ಯೆ ತೋರಿಸುವ ಮೂಲಕ ಸುಳ್ಳು ಹೇಳುತ್ತಿದ್ದಾರೆ ಎಂದು ದೂರಿದರು.

ಮಹಾತ್ಮಗಾಂಧಿ ಅವರ ಗ್ರಾಮ ಸ್ವರಾಜ್ ಹಾಗೂ ರಾಮರಾಜ್ಯ ಕಲ್ಪನೆಯನ್ನು ಕಾಂಗ್ರೆಸ್ ಸಾಕಾರಗೊಳಿಸಿದ್ದು, ಅದನ್ನು ಬಿಜೆಪಿ ಪಕ್ಷ ವಿನಾಶಗೊಳಿಸುವಂತ ಕಾಯ್ದೆ ಕಾನೂನುಗಳನ್ನು ರೂಪಿಸುತ್ತಿದೆ. ಪಂಚಾಯತ್ ರಾಜ್ ವ್ಯವಸ್ಥೆಗೆ ತಿದ್ದುಪಡಿ ಮಾಡಲಾಗುತ್ತಿದೆ. ತಾಲ್ಲೂಕು ಪಂಚಾಯತ್ ಅನ್ನು ನಿಷ್ಕ್ರಿಯಗೊಳಿಸಿ, ರದ್ದುಗೊಳಿಸಲಾಗುತ್ತಿದೆ. ಬಿಜೆಪಿ ರಾಮರಾಜ್ಯದ ಹೆಸರಿನಲ್ಲಿ ರಾವಣ ರಾಜ್ಯದ ನಿರಂಕುಶ ಆಡಳಿತ ನಡೆಸುತ್ತಿದ್ದು, ಈ ಬಗ್ಗೆ ಜನತೆಗೆ ತಿಳಿಸುವ ಕಾರ್ಯಕ್ರಮ ರೂಪಿಸಲಾಗುವುದೆಂದರು.

ಜಿಲ್ಲಾ ಪಂಚಾಯಿತಿ ಸದಸ್ಯ ಕೆ.ಎಸ್. ಬಸವಂತಪ್ಪ ಮಾತನಾಡಿ, ಕಾಂಗ್ರೆಸ್ ಸರ್ಕಾರ ಜಾರಿಗೆ ತಂದ ಹಲವು ಯೋಜನೆಗಳನ್ನು ಬಿಜೆಪಿ ಸರ್ಕಾರ ತಮ್ಮದೆಂದು ಸುಳ್ಳು ಹೇಳುತ್ತಿದ್ದಾರೆ. ರೈತ ಪರ ಎಂದು ಹೇಳುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತ ವಿರೋಧಿ ನೀತಿಗಳನ್ನು ಜಾರಿಗೆ ತರುತ್ತಿವೆ ಎಂದು ದೂರಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರು ಗಿರೀಶ್ ಮಾತನಾಡಿ, ಮೆಕ್ಕೆಜೋಳಕ್ಕೆ ಬೆಂಬಲ ಬೆಲೆ ನೀಡಿಲ್ಲ. ಖರೀದಿ ಕೇಂದ್ರ ತೆರೆದಿಲ್ಲ. ಇದರಿಂದ ರೈತರು ಸಂಕಷ್ಟ ಎದುರಿಸುವಂತಾಗಿದೆ. 600 ಕೋಟಿ ಎಪಿಎಂಸಿ ಆವರ್ತ ನಿಧಿಯ ಬಳಕೆಗೆ ಕ್ರಮ ಕೈಗೊಳ್ಳುತ್ತಿಲ್ಲ. ಭದ್ರಾ ನಾಲೆಗೆ ಇದೇ 6ರಿಂದ ನೀರು ಬಿಡುವುದಾಗಿ ಮಲೇಬೆನ್ನೂರಿನಲ್ಲಿ ನಡೆದ ಸಭೆಯಲ್ಲಿ ಹೇಳಿದ್ದರು. ಇನ್ನೂ ನೀರು ಹರಿಸಿಲ್ಲ. ಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಹಲವು ಕಾಮಗಾರಿಗಳು ಪೂರ್ಣಗೊಂಡಿಲ್ಲ. ನೀರು ಬಿಡುವುದು ಯಾವಾಗ ಎಂದು ಪ್ರಶ್ನಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಎಪಿಎಂಸಿ ಅಧ್ಯಕ್ಷ ಅಣಜಿ ಚಂದ್ರಶೇಖರಪ್ಪ, ಜಿಲ್ಲಾ ಪಂಚಾಯಿತಿ ಸದಸ್ಯ ಜಿ.ಸಿ. ನಿಂಗಪ್ಪ, ಮಾಜಿ ಸದಸ್ಯ ಬಿ. ಕರಿಬಸಪ್ಪ, ನಾಗರಾಜ್, ಬೂದಾಳ್ ಬಾಬು, ಮಂಜುನಾಥ, ಶಂಭು ಲಿಂಗಪ್ಪ, ಎಸ್.ಕೆ. ಮಲ್ಲಿಕಾರ್ಜುನ ಇದ್ದರು.

## ಮಲೇಬೆನ್ನೂರಿನಲ್ಲಿ ಸಿದ್ಧರಾಮ ಜಯಂತಿ ಆಚರಣೆ



ಮಲೇಬೆನ್ನೂರು, ಜ.14- ಇಲ್ಲಿನ ಪುರಸಭೆ ಮತ್ತು ನಾಡಕಛೇರಿಯಲ್ಲಿ ಕಾಯಕಯೋಗಿ ಶ್ರೀ ಗುರು ಸಿದ್ಧರಾಮೇಶ್ವರರ ಜಯಂತಿಯನ್ನು ಇಂದು ಆಚರಿಸಲಾಯಿತು.

ಸಿದ್ಧರಾಮೇಶ್ವರರ ಭಾವಚಿತ್ರಕ್ಕೆ ಪುರಸಭೆ ಅಧ್ಯಕ್ಷರಾದ ಶ್ರೀಮತಿ ನಾಹಿದಾ ಅಂಜುಂ ಸೈಯದ್ ಇಸ್ರಾರ್, ಉಪಾಧ್ಯಕ್ಷೆ ಶ್ರೀಮತಿ ಅಂಜಿನಮ್ಮ ವಿಜಯಕುಮಾರ್, ಮುಖ್ಯಾಧಿಕಾರಿ ಧರಣೇಂದ್ರಕುಮಾರ್, ಉಪತಹಶೀಲ್ದಾರ್ ಆರ್. ರವಿ, ಪುರಸಭೆ ಸದಸ್ಯರಾದ ಬಿ. ಸುರೇಶ್, ದಾ ದಾವಲಿ ಮುಖಂಡರಾದ ಭೋವಿ ಕುಮಾರ್, ಭೋವಿ ಶಿವು, ಆದಾಪುರ ವಿಜಯಕುಮಾರ್, ಪಿ.ಆರ್. ರಾಜು ಹಾಗೂ ಪುರಸಭೆ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಪುಷ್ಪಾರ್ಚನೆ ಮಾಡಿದರು.

**ನಿರ್ಲಕ್ಷ್ಯ ಆರೋಪ :** ಶ್ರೀ ಗುರು ಸಿದ್ಧರಾಮೇಶ್ವರರ ಜಯಂತಿ ಆಚರಣೆ ಮಾಡಲು ಸರ್ಕಾರದ ಆದೇಶವಿದ್ದರೂ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿ, ಆಚರಣೆ ವಿಳಂಬ ಮಾಡಿದರೆಂದು ಪುರಸಭೆ ಉಪಾಧ್ಯಕ್ಷರಾದ ಅಂಜಿನಮ್ಮ ದೂರಿದರು.

### ಪುರಸಭೆ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಸದಸ್ಯರಿಂದ ಖಂಡನೆ

ಪುರಸಭೆ ಅಧಿಕಾರಿಗಳು ದಾರ್ಶನಿಕರ ಜಯಂತಿ ಸೇರಿದಂತೆ ಇನ್ನಿತರೆ ಕಾರ್ಯಕ್ರಮಗಳ ಬಗ್ಗೆ ಪುರಸಭೆಯ ಸದಸ್ಯರಿಗೆ ಸರಿಯಾಗಿ ಮಾಹಿತಿ ನೀಡುತ್ತಿಲ್ಲ ಎಂದು ಪುರಸಭೆ ಸದಸ್ಯ ಬಿ. ಸುರೇಶ್ ಬೇಸರ ವ್ಯಕ್ತಪಡಿಸಿದರು.

ಇವತ್ತಿನ ಈ ಜಯಂತಿಯನ್ನು ಕಾಟಾಚಾರಕ್ಕೆ ಮಾಡಲಾಗಿದೆ ಎಂದು ಆರೋಪಿಸಿದರು.

## ಬೆಲೆ ಏರಿಕೆ ವಿರುದ್ಧ 20ರಂದು ಕಾಂಗ್ರೆಸ್ ಪ್ರತಿಭಟನೆ


ಬೆಂಗಳೂರು, ಜ. 14 - ಲಾಕ್‌ಡೌನ್ ಕಾರಣದಿಂದಾಗಿ ಜನರು ಸಂಕಷ್ಟದಲ್ಲಿರುವಾಗಲೇ ಆಸ್ತಿ ತೆರಿಗೆ, ಪೆಟ್ರೋಲ್ - ಡೀಸೆಲ್ ಬೆಲೆ ಏರಿಕೆಯಂತಹ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದರ ವಿರುದ್ಧ ಇದೇ ದಿನಾಂಕ 20ರಂದು ಕಾಂಗ್ರೆಸ್ ಬೃಹತ್ ಪ್ರತಿಭಟನೆ ನಡೆಸಲಿದೆ ಎಂದು ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಅವರು, ಯೋಜಿತವಲ್ಲದ ಲಾಕ್‌ಡೌನ್‌ನಿಂದಾಗಿ ಒಂದು ವರ್ಷ ವ್ಯಾಪಾರ-ವಹಿವಾಟು ಇಲ್ಲದೇ ಜನರು ಸಂಕಷ್ಟದಲ್ಲಿದ್ದಾರೆ. ಈ ಸಂದರ್ಭದಲ್ಲಿ ಆಸ್ತಿ ತೆರಿಗೆ ಮನ್ನಾ ಮಾಡಬೇಕು ಎಂದು ನಾವು ಒತ್ತಾಯಿಸಿದ್ದೆವು. ಆದರೆ, ಸರ್ಕಾರ ಮನ್ನಾ ಬದಲು ತೆರಿಗೆ ಏರಿಸಿದೆ ಎಂದವರು ಟೀಕಿಸಿದ್ದಾರೆ. ಯೋಜಿತವಲ್ಲದ ಲಾಕ್ ಡೌನ್‌ನಿಂದಾಗಿ ಒಂದು ವರ್ಷ ವ್ಯಾಪಾರ-ವಹಿವಾಟು ಇಲ್ಲದೇ ಜನರು ಸಂಕಷ್ಟದಲ್ಲಿದ್ದಾರೆ. ವಿಧವಾ ವೇತನ, ವಿದ್ಯಾರ್ಥಿ ವೇತನ, ವೃದ್ಧಾಪ್ಯ ವೇತನದಂತಹ ಸಹಾಯ ಧನವನ್ನು ಸರ್ಕಾರ ನಿಲ್ಲಿಸಿ ಕ್ರೌರ್ಯ ಮೆರೆದಿದೆ ಎಂದವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಾಜ್ಯ ಬಿಜೆಪಿ ಸರ್ಕಾರ ನೊಂದವರ ನೆರವಿಗೆ ಬರಲಿಲ್ಲ, ಕೊಟ್ಟ ಮಾತನ್ನೂ ಉಳಿಸಿಕೊಂಡಿಲ್ಲ. ಪೆಟ್ರೋಲ್ - ಡೀಸೆಲ್, ತರಕಾರಿ, ಆಹಾರ ಧಾನ್ಯ ಸೇರಿದಂತೆ ಅಗತ್ಯ ವಸ್ತುಗಳ ಬೆಲೆಗಳನ್ನು ಏರಿಕೆ ಮಾಡಲಾಗಿದೆ ಎಂದವರು ಆಕ್ಷೇಪಿಸಿದ್ದಾರೆ.

ಕಳೆದ ತಿಂಗಳಲ್ಲಿ ಮೂರು ಬಾರಿ ಪೆಟ್ರೋಲ್ - ಡೀಸೆಲ್ ಬೆಲೆ ಏರಿಕೆಯಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಕಡಿಮೆಯಾಗಿದ್ದರೂ ಪೆಟ್ರೋಲ್ - ಡೀಸೆಲ್ ಬೆಲೆ ಇಳಿಯುತ್ತಿಲ್ಲ. ಈ ನಡುವೆಯೇ. ವಿದ್ಯುತ್ ಬೆಲೆಯನ್ನು ಮೂರನೇ ಬಾರಿಗೆ ಏರಿಸಲಾಗುತ್ತಿದೆ. ಅನಿಲ ಸಿಲಿಂಡರ್ ಬೆಲೆ 300 ರೂ. ಇದ್ದದ್ದು ಈಗ 700 ರೂ.ಗಳಿಗೆ ತಲುಪಿದೆ. ಈ ಎಲ್ಲವನ್ನೂ ಖಂಡಿಸಿ ಪ್ರತಿಭಟನೆ ನಡೆಸಲಾಗುವುದು ಎಂದವರು ಹೇಳಿದ್ದಾರೆ.

## ಜಗಳೂರಿನಲ್ಲಿ ಸಿದ್ದರಾಮೇಶ್ವರ ಜಯಂತಿ ಸರಳ ಆಚರಣೆ



ಜಗಳೂರು, ಜ.14 - ಕೋವಿಡ್ ಹಿನ್ನೆಲೆಯಲ್ಲಿ ಸಿದ್ದರಾಮೇಶ್ವರ ಜಯಂತಿ ಸಮಾರಂಭವನ್ನು ತಾಲ್ಲೂಕು ಆಡಳಿತದ ವತಿಯಿಂದ ಪಟ್ಟಣದ ಮಿನಿ ವಿಧಾನಸೌಧದಲ್ಲಿ ಗುರುವಾರ ಸರಳವಾಗಿ ಆಚರಿಸಲಾಯಿತು.

ತಹಶೀಲ್ದಾರ್ ನಾಗವೇಣಿ, ತಾಲ್ಲೂಕು ಪಂಚಾಯಿತಿ ಇಒ ಮಲ್ಲಾನಾಯ್ಕ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮಹೇಶ್ವರಪ್ಪ, ಬಿಸಿಎಂ ಇಲಾಖೆ ವಿಸ್ತರಣಾಧಿಕಾರಿ ವೆಂಕಟೇಶ ಮೂರ್ತಿ, ಬಿಇಒ ಸಿ.ಎಸ್. ವೆಂಕಟೇಶ್ ಮತ್ತು ಭೋವಿ ಸಮಾಜದ ಮುಖಂಡರಾದ ಎಂ.ಆರ್.ಪುಟ್ಟಣ್ಣ, ಮಾಳಮ್ಮನಹಳ್ಳಿ ವೆಂಕಟೇಶ್, ವಕೀಲ ಡಿ. ಶ್ರೀನಿವಾಸ್, ಎಸ್.ಎನ್. ತಿಪ್ಪೇಸ್ವಾಮಿ ಭಾಗವಹಿಸಿದ್ದರು.

**ಅಧಿಕಾರಿಗಳ ಸಾಮೂಹಿಕ ಗೈರು :** 12ನೇ ಶತಮಾನದ ಕಾಯಕ ಯೋಗಿ ಶರಣ ಸಿದ್ದರಾಮೇಶ್ವರ ಜಯಂತಿ ಸಮಾರಂಭಕ್ಕೆ ಬೆರಳೆಣಿಕೆ ಅಧಿಕಾರಿಗಳನ್ನು ಹೊರತುಪಡಿಸಿ ಬಹುತೇಕ ಅಧಿಕಾರಿಗಳು ಗೈರು ಹಾಜರಾಗಿದ್ದರು.

ಸರ್ಕಾರದಅಧಿಕೃತಕಾರ್ಯಕ್ರಮವಾಗಿರುವ ಸಿದ್ದರಾಮೇಶ್ವರ ಜಯಂತಿ ಸಮಾರಂಭಕ್ಕೆ ಪಂಚಾಯತ್ ರಾಜ್ ಇಲಾಖೆ, ಲೋಕೋಪಯೋಗಿ, ಗ್ರಾಮೀಣ ನೀರು ಸರಬರಾಜು ಇಲಾಖೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಬೆಸ್ಕಾಂ, ಪಶು ಸಂಗೋಪನಾ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸೇರಿದಂತೆ ಬಹುತೇಕ ಇಲಾಖೆ ಅಧಿಕಾರಿಗಳು ಹಾಜರಾಗದೆ ಬೇಜವಾಬ್ದಾರಿಯಿಂದ ವರ್ತಿಸಿದ್ದು, ಕರ್ತವ್ಯ ಲೋಪ ಎಸಗಿದ್ದಾರೆ. ಗೈರಾದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ತಾಲ್ಲೂಕು ಭೋವಿ ಸಮಾಜದ ಮುಖಂಡರು ತಹಶೀಲ್ದಾರ್ ನಾಗವೇಣಿ ಹಾಗೂ ಇಒ ಮಲ್ಲಾನಾಯ್ಕ ಅವರನ್ನು ಒತ್ತಾಯಿಸಿದರು.

ಎಲ್ಲಾ ಅಧಿಕಾರಿಗಳಿಗೆ ಜಯಂತಿ ಸಮಾರಂಭಕ್ಕೆ ಹಾಜರಾಗುವಂತೆ ಪೂರ್ವಭಾವಿ ಸಭೆಯಲ್ಲೇ ಸೂಚಿಸಲಾಗಿತ್ತು. ಆದರೂ ಗೈರಾಗಿದ್ದಾರೆ ಎಂದು ತಹಶೀಲ್ದಾರ್ ನಾಗವೇಣಿ ಅವರು ಸಮಜಾಯಿಷಿ ನೀಡಿದರು.


ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ. ಜೈ ಸಹಕಾರ

**ಜಂಗಮ ಸೌಹಾರ್ದ ಸಹಕಾರಿ ನಿಯಮಿತ**

16ನೇ ಕ್ರಾಸ್, ಕೆ.ಟಿ.ಜೆ. ನಗರ, ಹದಡಿ ರಸ್ತೆ, ದಾವಣಗೆರೆ-577 002.

ಮಾನ್ಯ ಮತದಾರ ಬಂಧುಗಳೇ, **"ಪಿ.ಜಿ. ರಾಜಶೇಖರ ಗ್ರೂಪ್"**

ಸಹಕಾರಿಯ ಉತ್ತಮ ಅಭಿವೃದ್ಧಿಗೆ, ಸದಸ್ಯ ಬಂಧುಗಳಿಗೆ ಪ್ರಮಾಣಿಕವಾಗಿ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ಈ ಕೆಳಕಂಡ ನಾವುಗಳು ಅಭ್ಯರ್ಥಿಗಳಾಗಿ ಸಹಕಾರಿಯ ಉನ್ನತ ಪ್ರಗತಿಗಾಗಿ ಶ್ರಮಿಸಲು ಮಾಜಿ ಅಧ್ಯಕ್ಷರಾದ **"ಪಿ.ಜಿ. ರಾಜಶೇಖರ್ ಗ್ರೂಪ್"** ಇಂದ ಸ್ಪರ್ಧಿಸಿರುತ್ತೇವೆ. ತಮ್ಮ ಅತ್ಯಮೂಲ್ಯವಾದ ಮತವನ್ನು ಈ ಕೆಳಕಂಡ 10 ಅಭ್ಯರ್ಥಿಗಳಿಗೂ ತಲಾ 1 ರಂತೆ ಮತವನ್ನು ನೀಡಿ ನಮ್ಮೆಲ್ಲರನ್ನೂ ಜಯಶೀಲರನ್ನಾಗಿ ಮಾಡಿ ತಮ್ಮ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ.


| ಕ್ರ.ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ | ಗುರುತು |
|---|---|---|---|
| 14 | ರಾಜಶೇಖರಯ್ಯ ಪಿ.ಜಿ. ಸಾಮಾನ್ಯ | | |
| 4 | ಚನ್ನಬಸವಯ್ಯ ಕೆ.ಎಂ. ಸಾಮಾನ್ಯ | | |
| 9 | ದ್ರಾಕ್ಷಾಯಣಮ್ಮ ಮಹಿಳಾ ಮೀಸಲು | | |
| 16 | ವೀರಭದ್ರಯ್ಯ ಶಾಸ್ತ್ರಿ ಹೆಚ್. ಸಾಮಾನ್ಯ | | |
| 19 | ವೀರರಾಜೇಂದ್ರಸ್ವಾಮಿ ಬಿ.ಎಂ. ಸಾಮಾನ್ಯ | | |

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ | ಗುರುತು |
|---|---|---|---|
| 21 | ಸುರೇಶ್ ಹೆಚ್.ಪಿ. ಸಾಮಾನ್ಯ | | |
| 5 | ಚಂದ್ರಮ್ಮ ಕೆ.ಎಂ. ಮಹಿಳಾ ಮೀಸಲು | | |
| 3 | ಕಿರಣಕುಮಾರ್ ಜೆ. ಸಾಮಾನ್ಯ | | |
| 20 | ಸಿದ್ದಯ್ಯ ಎಂ.ಎಸ್. (ಸಿದ್ದೇಶ್ ಕೋಟೆಹಾಳ್) ಸಾಮಾನ್ಯ | | |
| 1 | ಅರುಣಕುಮಾರ್ ಜೆ.ಕೆ. ಸಾಮಾನ್ಯ | | |

ದಿನಾಂಕ : 17-1-2021ನೇ ಭಾನುವಾರ
ಸಮಯ : ಬೆಳಿಗ್ಗೆ 9-00 ರಿಂದ ಸಂಜೆ 4-00ರ ವರೆಗೆ
ಸ್ಥಳ : **ಸದ್ಯೋಜಾತ ಸ್ವಾಮಿಗಳ ಮಠ, 'ಶಿವಾಚಾರ್ಯ ನಿಕೇತನ'**
ಎಂ.ಸಿ.ಸಿ. 'ಬಿ' ಬ್ಲಾಕ್, ಶಾಮನೂರು ರಸ್ತೆ, ದಾವಣಗೆರೆ.

ವಿಶೇಷ ಸೂಚನೆ : ಮತದಾನಕ್ಕೆ ಬರುವಾಗ ಸಹಕಾರಿಯ ಗುರುತಿನ ಚೀಟಿ ಹಾಗೂ ಆಧಾರ್ ಕಾರ್ಡ್ ತರಲು ಕೋರಿದೆ.

ಸಂಪರ್ಕಕ್ಕಾಗಿ
9481875554, 9341127879, 9448443095.




ಎಸ್.ಎಂ. ಗುರುದೇವಮೂರ್ತಿ
ಸಂಸ್ಥಾಪಕರು

ಸ್ವಚ್ಛ, ದಕ್ಷ, ಪಾರದರ್ಶಕ, ಆಡಳಿತ ಮತ್ತು ಅಭಿವೃದ್ಧಿಗೆ ನಿಮ್ಮ ಮತ

**ಸಹಕಾರಿಯ ಷೇರುದಾರರಲ್ಲಿ ಮನವಿ**

ದಿನಾಂಕ : 17.01.2021ರ ಭಾನುವಾರ ನಡೆಯಲಿರುವ ಜಂಗಮ ಸೌಹಾರ್ದ ಸಹಕಾರಿ ನಿಯಮಿತದ ನಿರ್ದೇಶಕ ಸ್ಥಾನಗಳಿಗೆ ಸ್ಪರ್ಧಿಸಿರುವ ಶ್ರೀ ಪಿ.ಜಿ. ರಾಜಶೇಖರ್ ಅವರ ನೇತೃತ್ವದ ಗುಂಪನ್ನು ಬೆಂಬಲಿಸುತ್ತೇವೆ. ಚುನಾವಣೆಯಲ್ಲಿ **ಶ್ರೀ ಪಿ.ಜಿ. ರಾಜಶೇಖರ್** ನೇತೃತ್ವದ ಗುಂಪಿನ ಎಲ್ಲಾ 10 ಜನ ಅಭ್ಯರ್ಥಿಗಳಿಗೆ ಮಾನ್ಯ ಅರ್ಹ ಷೇರುದಾರರು ತಮ್ಮ ಮತವನ್ನು ಚಲಾಯಿಸುವ ಮೂಲಕ ಅವರನ್ನು ಚುನಾಯಿಸುವುದರೊಂದಿಗೆ ನಮ್ಮ ಸಹಕಾರಿಯ ಶ್ರೇಯೋಭಿವೃದ್ಧಿಗೆ ಸಹಕಾರ ನೀಡುವಂತೆ ಕೋರುತ್ತೇವೆ.



ಡಿ.ಸಿ. ಚಂದ್ರಯ್ಯ
ಸಂಸ್ಥಾಪಕರು

## ಸಂಕ್ರಾಂತಿ



ಸುಗ್ಗಿ ಕಾಲ ಬಂದು
ಹಿಗ್ಗಿನ ದಿನ ಬಂದು
ಸಗ್ಗದ ಸುಖ ಬಂದು
ಅಗ್ಗದ ದಿನಗಳಂದು

ಸಂಕ್ರಾಂತಿ ಹಬ್ಬ ಬಂದು
ಎಲ್ಲೆಲ್ಲೂ ಸಂಭ್ರಮವಿಂದು
ಬೆಲ್ಲ ಅಕ್ಕಿ ಬೇಳೆಯಿಂದ
ಪೊಂಗಲ್ ಸವಿಯುದಿಂದು

ಪುಟ್ಟ ಮಕ್ಕಳಿದ್ದ ಮನೆಯಲ್ಲಿ
ಮಕ್ಕಳಿಗೆ ಹೊಸ ಬಟ್ಟೆ ತೊಡಿಸಿ
ಮಣೆಯ ಮೇಲೆ ಕುಳ್ಳಿರಿಸಿ
ತಲೆಯ ಮೇಲೆ ಕರಿ ಎರೆಯುವರಿಂದು

ಮುತ್ತೈದೆಯರ ಕೈಯಲ್ಲಿ
ಪುಟ್ಟ ಮಕ್ಕಳಿಗೆ ಆರತಿ ಎತ್ತಿ
ಮುತ್ತೈದೆಯರಿಗೆ ಕುಂಕುಮ ಹಚ್ಚಿ
ತಾಂಬೂಲ ಕೊಟ್ಟು ಸಂಭ್ರಮಿಸುವರು

ಎಳ್ಳು ಬೆಲ್ಲ ಹಂಚಿ ತಿಂದು
ಹಬ್ಬದ ಸಂತಸದಲ್ಲಿಂದು
ಮನೆ ಮನೆಗೆ ಹೋಗಿ ಬಂದು
ಎಳ್ಳು ಬೆಲ್ಲ ಕಬ್ಬು ಬೀರುವರಿಂದು

ಹೆಣ್ಣು ಮಕ್ಕಳು ಜರತಾರಿ ಲಂಗ ತೊಟ್ಟು
ಕೈಗಳಿಗೆ ಬಣ್ಣದ ಗಾಜಿನ ಬಳೆಗಳ ತೊಟ್ಟು
ಜುಮುಕಿ ಓಲೆ ಸರಗಳ ಧರಿಸಿಕೊಂಡು
ತಲೆ ತುಂಬಾ ಹೂ ಮುಡಿದು ಓಡಾಡುವರು

**- ಹೆಚ್.ಕೆ.ಸತ್ಯಭಾಮ ಮಂಜುನಾಥ,**
ದಾವಣಗೆರೆ

# ನಾನು-ನೀವು ಬೇರೆಯಲ್ಲ

**ಸಮಾಜವನ್ನು 2ಎಗೆ ಸೇರಿಸಬೇಕೆಂಬುದು ಪಂಚಮಸಾಲಿ ಸಮಾಜದ ಪ್ರಮುಖ ಬೇಡಿಕೆಯಾಗಿತ್ತು. ಆದರೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮೀಸಲಾತಿ ಕುರಿತು ಯಾವ ಭರವಸೆಯನ್ನೂ ನೀಡಲಿಲ್ಲ.**



**(1ನೇ ಪುಟದಿಂದ)** ಸಂಘಟನೆ, ಸಹಬಾಳ್ವೆ ಎಂಬ ಧ್ಯೇಯಗಳನ್ನು ಸಾಕಾರಗೊಳಿಸುವುದೇ ಹರಜಾತ್ರೆ ಉದ್ದೇಶವಾಗಿದೆ ಎಂದರು.

ನೂರಾರು ತತ್ವಜ್ಞಾನಿಗಳು, ಸಮಜ ಸುಧಾರಕರು, ಪ್ರಬಲ ನಾಯಕರು, ಸ್ವಾತಂತ್ರ್ಯ ಹೋರಾಟಗಾರರನ್ನು ಪಂಚಮಸಾಲಿ ಸಮಾಜ ನಾಡಿಗೆ ನೀಡಿದೆ. ಅವರೆಲ್ಲಾ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ ಎಂದರು. 12ನೇ ಶತಮಾನ ಮಹತ್ವದ ಶತಮಾನ ವಾಗಿತ್ತು. ಅಂದು ಬಸವಣ್ಣನವರು ಸಮಾನತೆಯ ಧ್ವನಿ ಎತ್ತಿದ್ದರು. ಕಾಯಕವೇ ಕೈಲಾಸ ಎಂಬ ದುಡಿಮೆಯ ಮಂತ್ರ ಬೋಧಿಸಿದ್ದರು. ಬಸವಣ್ಣ ನವರ ಸಮಾನತೆಯ ತತ್ವವನ್ನು ಪಂಚಮಸಾಲಿ ಸಮಾಜ ಪಾಲಿಸುತ್ತಿದೆ ಎಂದು ನುಡಿದರು.

ಸಚಿವ ಮುರುಗೇಶ್ ನಿರಾಣಿ ಅವರ ಪ್ರಯತ್ನದಿಂದ ವೀರಶೈವ ಪಂಚಮಸಾಲಿ ಸಮಾಜವನ್ನು ಹಿಂದುಳಿದ ವರ್ಗಗಳ ಪಟ್ಟಿ 3 ಬಿಗೆ ಸೇರಿಸುವ ಕೆಲಸವನ್ನು ಸರ್ಕಾರ ಮಾಡಿತ್ತು ಎಂದು ನೆನಪಿಸಿಕೊಂಡ ಮುಖ್ಯಮಂತ್ರಿಗಳು, ಕೆಲ ದಿನಗಳ ಹಿಂದಷ್ಟೇ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ಸ್ಥಾಪಿಸಿ, ಬಡ ವರ್ಗದ ಏಳ್ಗೆಗಾಗಿ 500 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ ಎಂದರು.

ಕೇಂದ್ರ ಸಂಸದೀಯ ಕಾರ್ಯದರ್ಶಿಗಳೂ, ಕೇಂದ್ರ ಗಣಿ ಮತ್ತು ಕಲ್ಲಿದ್ದಲು ಸಚಿವರೂ ಆದ ಪ್ರಹ್ಲಾದ್ ಜೋಷಿ ಮಾತನಾಡುತ್ತಾ, ಕೃಷಿ ಹಾಗೂ ಗೋವಿಗೂ ಅವಿನಾಭಾವ ಸಂಬಂಧವಿದೆ. ಕೃಷಿ ಮಾಡುವ ಪಂಚಮಸಾಲಿ ಸಮಾಜದಿಂದಲೇ ಗೋ ಸಮುದಾಯ ಉಳಿಯಲು ಕಾರಣವಾಗಿದೆ ಎಂದರು.

ಹರಿಹರದ ತುಂಗಭದ್ರಾ ನದಿ ಸ್ವಚ್ಛತೆ ಬಗ್ಗೆ ರಾಜ್ಯದ ಮೂಲಕ ಪ್ರಸ್ತಾವನೆ ಸಲ್ಲಿಸಿದರೆ, ಕೇಂದ್ರ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಲಿದೆ ಎಂದರು.

ಗೃಹ ಸಚಿವ ಬಸವರಾಜ ಬೊಮ್ಮಾಯಿ ಮಾತನಾಡುತ್ತಾ, ಶ್ರಮ, ಪ್ರೀತಿ, ವಿಶ್ವಾಸ ಇವು ಪಂಚಮಸಾಲಿಗರ ಗುಣಧರ್ಮಗಳು. ಬೇರೆ ಬೇರೆ ವೃತ್ತಿಯಲ್ಲಿದ್ದವರು ಕಾಲಕ್ಕನುಗುಣವಾಗಿ ವೃತ್ತಿ ಬದಲಿಸಿ ಬದುಕು ಕಟ್ಟಿಕೊಂಡಿದ್ದಾರೆ. ಆದರೆ ಪಂಚಮಸಾಲಿ ಸಮಾಜ ಮಣ್ಣಿನ ಜೊತೆ ವಿಶ್ವಾಸ ಹೊಂದಿ, ಕೃಷಿ ಕಾಯಕದಲ್ಲಿದ್ದಾರೆ ಎಂದರು.

2008ರಲ್ಲಿ ಕ್ಯಾಬಿನೆಟ್‌ನಲ್ಲಿ ಸಮಾಜಕ್ಕೆ 3ಬಿ ಮೀಸಲಾತಿ ಕಲ್ಪಿಸಿ ಉತ್ತಮ ಬುನಾದಿ ಹಾಕಿಕೊಟ್ಟವರು ಮುಖ್ಯಮಂತ್ರಿಗಳು ಎಂದರು. ಸರ್ಕಾರ ಹಾಗೂ ಸಮಾಜ ಅನ್ಯೋನ್ಯವಾಗಿದ್ದರೆ ಅಭಿವೃದ್ಧಿ ಸಾಧ್ಯ. ಹಿಮಾಲಯದಲ್ಲಿ ತಪ್ಪಸ್ಸು ಮಾಡಿದ ಶ್ರೀಗಳು, ಸಮಾಜವನ್ನು ಹಿಮಾಲಯ ದೆತ್ತರಕ್ಕೆ ಕೊಂಡೊಯ್ಯಲಿ ಎಂದು ಆಶಿಸಿದರು.

ಸ್ವಾವಲಂಬಿ ಸಂದೇಶ ನೀಡಿದ ಸಚಿವ ಮುರುಗೇಶ್ ನಿರಾಣಿ, ಸಮಾಜ ಬಾಂಧವರು ಕೃಷಿ, ಉದ್ಯಮ ಸೇರಿದಂತೆ ಯಾವುದೇ ವೃತ್ತಿಯಲ್ಲಿ ನಿರತರಾದರೂ, ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುವಂತೆ ಕರೆ ನೀಡಿದರು.

ಈ ಹಿಂದೆ ಜಾತಿ ಕಾಲಂನಲ್ಲಿ ಪಂಚಮಸಾಲಿ ಹೆಸರು ಬರುವಂತೆ ಮಾಡಿ, 3ಬಿ ಮೀಸಲಾತಿ ಕೊಟ್ಟಿದ್ದೇ ಮುಖ್ಯಮಂತ್ರಿ ಯಡಿಯೂರಪ್ಪ ಅವರು. ಸಮಾಜಕ್ಕೆ ಮುಖ್ಯಮಂತ್ರಿಗಳ ಸಹಕಾರ ಮೊದಲಿನಿಂದಲೂ ಇದೆ. ಸಮಾಜವು ಸದಾ ಅವರ ಬೆಂಬಲಕ್ಕಿರಬೇಕು. ಮುಂದಿನ ದಿನಗಳಲ್ಲಿ ಸಮಾಜಕ್ಕೆ 2ಎ ಮೀಸಲಾತಿ ನೀಡುವ ವಿಶ್ವಾಸವೂ ಇದೆ ಎಂದರು.

ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳು ರೈತರ ಪರವಾಗಿದ್ದು, ಕೆಲ ರಾಜಕಾರಣಿಗಳು ಜನತೆಗೆ ಕಾಯ್ದೆಗಳ ಬಗ್ಗೆ ತಪ್ಪು ಸಂದೇಶ ನೀಡುತ್ತಿದ್ದಾರೆ. ಇದಕ್ಕೆ ಕಿವಿಗೊಡಬಾರದು ಎಂದು ಸಲಹೆ ನೀಡಿದರು.

ಮುಖ್ಯಮಂತ್ರಿ ಯಡಿಯೂರಪ್ಪ ಅವರು ತಮ್ಮ ಪುತ್ರರಂತೆಯೇ ನನ್ನ ಮೇಲೂ ಪ್ರೀತಿ ತೋರಿಸಿದ್ದಾರೆ. ನಮ್ಮಗಳ ನಡುವೆ ಯಾವುದೇ ಬೇಧ-ಭಾವ ಇಲ್ಲ ಎಂದು ಸ್ಪಷ್ಟಪಡಿಸಿದರು.

ನವಲಗುಂದ ಶಾಸಕರೂ, ಬೆಂಗಳೂರು ನಗರ ಮೂಲಭೂತ ಹಣಕಾಸು ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆದ ಶಂಕರ ಪಾಟೀಲ ಮುನೇನಕೊಪ್ಪ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಯಾರನ್ನೂ ದ್ವೇಷಿಸಿದೆ ಎಲ್ಲರೊಂದಿಗೂ ವಿಶ್ವಾಸದಿಂದಿರುವ ಸಮಾಜ ಪಂಚಮಸಾಲಿ ಸಮಾಜ. ಸಮಾಜಕ್ಕೆ ಮೀಸಲಾತಿ ನೀಡುವ ಬಗ್ಗೆ ಮುಖ್ಯಮಂತ್ರಿಗಳು ಗಮನ ಹರಿಸಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಪೀಠದ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ, ಸಮಾಜದ ಯುವ ಜನಾಂಗ ಸ್ವಾಲಂಬಿಗಳಾಗಿ ಬದಕಲು ಪಣ ತೊಡಬೇಕು. ಈ ನಿಟ್ಟಿನಲ್ಲಿ ಯವಕರಿಗೆ ಮೌಲ್ಯ ಶಿಕ್ಷಣದ ತರಬೇತಿ ನೀಡುವ ಉದ್ದೇಶವಿದೆ ಎಂದರು.

ಉಪ ಮುಖ್ಯಮಂತ್ರಿಗಳೂ, ಉನ್ನತ ಶಿಕ್ಷಣ ಹಾಗೂ ಐಟಿ-ಬಿಟಿ ಸಚಿವರೂ ಆದ ಡಾ.ಸಿ.ಎಸ್. ಅಶ್ವತ್ ನಾರಾಯಣ, ಪಂಚಮ ಸಾಲಿ ಸಮಾಜ ಭೂಮಿಯನ್ನು ನಂಬಿ ಬದುಕುವಂತಹದ್ದು. ವೃತ್ತಿಯಲ್ಲಿ ಶ್ರದ್ಧೆ, ಆಸಕ್ತಿ, ಪರಿಶ್ರಮ ಇದ್ದಾಗ ಅರ್ಥ ಪೂರ್ಣ ಬದುಕು ಸಾಧ್ಯ. ಕೃಷಿಯಲ್ಲಿ ನೂತನ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಅಭಿವೃದ್ಧಿ ಹೊಂದಲು ಕರೆ ನೀಡಿದರು.

ಸಮಾರಂಭಕ್ಕೂ ಮುನ್ನ ತುಮಕೂರು ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿ ಹರದ್ವರ ಉದ್ಘಾಟಿಸಿದರು.

ಮಹಾರಾಷ್ಟ್ರದ ನಿಕಟಪೂರ್ವ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ವರ್ಚುಯಲ್ ಮೂಲಕ ಮಾತನಾಡಿದರು. ಸಂಸದ ಜಿ.ಎಂ. ಸಿದ್ದೇಶ್ವರ, ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್, ಶಾಸಕರುಗಳಾದ ಎಸ್.ಎ. ರವೀಂದ್ರನಾಥ್, ಎಸ್.ವಿ. ರಾಮಚಂದ್ರ, ಪ್ರೊ.ಲಿಂಗಣ್ಣ, ಸಮಾಜ ಮುಖಂಡರಾದ ಬಾವಿ ಬೆಟ್ಟಪ್ಪ, ಬಸವರಾಜ ದಿಂಡೂರು, ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಶಂಕರಗೌಡ ಪಾಟೀಲ ಇತರರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಶ್ರೀಪೀಠದ ಧರ್ಮದರ್ಶಿ ಚಂದ್ರಶೇಖರ ಪೂಜಾರ್ ಸ್ವಾಗತಿಸಿದರು. ಕು.ಅತಿಥಿ ಕುರುವತ್ತಿ ಪ್ರಾರ್ಥಿಸಿದರು. ಸುಮಾ ನಾಗೇಶ್, ರಚನಾ ಪ್ರಕಾಶ್ ಕಾರ್ಯಕ್ರಮ ನಿರೂಪಿಸಿದರು.

## ನಾಳೆ ದೇಶದ 3 ಲಕ್ಷ ಜನರಿಗೆ ಲಸಿಕೆ

**(1ನೇ ಪುಟದಿಂದ)** ವಿಶ್ವವಿದ್ಯಾನಿಲಯ ರೂಪಿಸಿರುವ ಕೊವಿಶೀಲ್ಡ್ ಹಾಗೂ ಭಾರತ್ ಬಯೋಟೆಕ್ ಅಭಿವೃದ್ಧಿ ಪಡಿಸಿರುವ ಕೊವ್ಯಾಕ್ಸಿನ್ ಲಸಿಕೆಗಳು ಲಭ್ಯವಿವೆ. ಆದರೆ, ಇವುಗಳಲ್ಲಿ ಇದೇ ಬೇಕೆಂದು ಆಯ್ಕೆ ಮಾಡಿಕೊಳ್ಳುವ ಅವಕಾಶ ಸದ್ಯಕ್ಕಿಲ್ಲ.

ಲಸಿಕೆ ಪಡೆಯುವುದು ಸ್ವ ಇಚ್ಛೆಗೆ ಬಿಟ್ಟ ವಿಷಯ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಈಗಾಗಲೇ ಸ್ಪಷ್ಟಪಡಿಸಿದೆ. ಇದುವರೆಗೂ ಪುಣೆಯ ಸೆರಮ್ ಇನ್‌ಸ್ಟಿಟ್ಯೂಟ್ 1.1 ಕೋಟಿ ಲಸಿಕೆಗಳನ್ನು ಉತ್ಪಾದಿಸಿದ್ದು, ಅವುಗಳಲ್ಲಿ ಬಹುತೇಕವನ್ನು ದೇಶದ 60 ಕೇಂದ್ರಗಳಿಗೆ ರವಾನಿಸಿದೆ.

ಕೊವ್ಯಾಕ್ಸಿನ್‌ನ 55 ಲಕ್ಷ ಡೋಸ್‌ಗಳನ್ನು ಉತ್ಪಾದಿಸಲಾಗಿದೆ. 2.4 ಲಕ್ಷ ಡೋಸ್‌ಗಳನ್ನು 12 ತಾಣಗಳಿಗೆ ರವಾನಿಸಲಾಗಿದೆ.

ಒಬ್ಬ ವ್ಯಕ್ತಿಗೆ 28 ದಿನಗಳ ಅಂತರದಲ್ಲಿ ಎರಡು ಬಾರಿ ಲಸಿಕೆಯ ಡೋಸ್ ನೀಡಬೇಕಿದೆ. ಆನಂತರದ ಹದಿನಾಲ್ಕು ದಿನಗಳ ನಂತರವೇ ಲಸಿಕೆ ಪರಿಣಾಮಕಾರಿಯಾಗಲಿದೆ. ಹೀಗಾಗಿ ಜನರು ಕೊರೊನಾ ಮುನ್ನೆಚ್ಚರಿಕೆ ಕ್ರಮಗಳನ್ನು ಮುಂದುವರೆಸಬೇಕು ಎಂದು ಕೇಂದ್ರ ಸಚಿವಾಲಯ ಹೇಳಿದೆ.

## ಮಾಯಕೊಂಡದಲ್ಲಿ ಮುಖ್ಯಮಂತ್ರಿಗೆ ಜಯಘೋಷ



ಮಾಯಕೊಂಡ, ಜ.14- ಮಾಯಕೊಂಡ ತಾಲ್ಲೂಕು ಹೋರಾಟ ಸಮಿತಿ ಮತ್ತು ಪುರ ಅಭಿವೃದ್ಧಿ ಕ್ರಿಯಾಶೀಲ ವೇದಿಕೆ ಸದಸ್ಯರೆಲ್ಲರೂ ಊರಿನ ವೃತ್ತದಲ್ಲಿ ಸಭೆ ಸೇರಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರಿಗೆ ಮತ್ತು ಬಿ.ವೈ. ವಿಜಯೇಂದ್ರ ಅವರಿಗೆ ಜಯಘೋಷ ಹಾಕಿದರು.

ಮಾಯಕೊಂಡ ಮತ್ತು ಚಿತ್ರದುರ್ಗದ ಧರ್ಮಪುರ ಹೆಸರುಗಳು ತಾಲ್ಲೂಕು ಕೇಂದ್ರವಾಗಲು ಅಂಕಿತ ಪಡೆದುಕೊಳ್ಳುವುದಕ್ಕಾಗಿ ಮುಖ್ಯಮಂತ್ರಿಯವರ ಕಚೇರಿಗೆ ಬಂದಿದೆ ಎಂಬ ಅಂಶವನ್ನು ಕೇಳಿ ನೂರಾರು ಜನತೆ ಪುಳಕಿತರಾಗಿ ಜಯಘೋಷ ಹಾಕಿದರು.

ಸಭೆಯಲ್ಲಿ ಅಧ್ಯಕ್ಷ ಎಂ.ಎಸ್.ಕೆ. ಶಾಸ್ತ್ರಿ, ಎಸ್.ಆರ್. ಗೋವಿಂದರಾಜು, ಜಿ.ಎಂ. ಬಸವರಾಜಪ್ಪ, ಜಿ.ಹೆಚ್. ಪ್ರಕಾಶಪ್ಪ, ಗುಡ್ಲು ಹನುಮಂತಪ್ಪ, ಪಟ್ಟಣಶೆಟ್ಟಿ ಶೇಖರಪ್ಪ, ಕೆ.ಎಂ. ಮುರುಗೇಶಪ್ಪ, ಬೀರಲಿಂಗಪ್ಪ, ನಾಗರಾಜಚಾರ್, ತರಗಾರ ಅಂಜನಪ್ಪ, ಮುದ್ದೇರ ನಿಂಗಣ್ಣ, ಪರಕೆ ಆನಂದಪ್ಪ, ಅಂಗಡಿ ಮಲ್ಲಿಕಾರ್ಜುನಪ್ಪ ಇನ್ನಿತರರಿದ್ದರು.

## ಮೀಸಲಾತಿ ನೀಡುವ ಭರವಸೆ ಇದೆ: ಶ್ರೀ



**(1ನೇ ಪುಟದಿಂದ)** ಮುಖ್ಯಮಂತ್ರಿಗಳು ಸಮಾಜಕ್ಕೆ ಎಂದೆಂದಿಗೂ ನ್ಯಾಯ ಒದಗಿಸುತ್ತಿದ್ದಾರೆ. ತಮ್ಮ ಕೆಲಸವನ್ನು ಕೃತಿ ಮೂಲಕ ಮಾಡಿ ತೋರಿಸಿದ್ದಾರೆ. ಮೀಸಲಾತಿಯನ್ನೂ ನೀಡುವ ಭರವಸೆ ಇದೆ. ಶ್ರೀಪೀಠ ಸಮಗ್ರ ಶಕ್ತಿಯಾಗಿ ತಮ್ಮೊಂದಿಗಿರಲಿದೆ ಎಂದರು.

ಸಮಾಜದ ಶೇ.10ರಷ್ಟು ಜನರಿಗೆ ಮನೆಯಿಲ್ಲ, ಶೇ.15ರಷ್ಟು ಜನತೆಗೆ ಭೂಮಿ ಇಲ್ಲ, ಶೇ.95ರಷ್ಟು ಜನರೂ ಭೂಮಿ ನಂಬಿ ಬದುಕಿದ್ದಾರೆ. ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಹಿಂದುಳಿದಿದೆ. ಇಂತಹ ಸಮಾಜವನ್ನು ಜಾಗೃತಗೊಳಿಸಲು ಹೊರಟಿದ್ದು, ಹನುಮನಾಳ ಅವರ ದೂರ ದೃಷ್ಟಿಗೆ ಸಾಕ್ಷಿ ಎಂದರು.

2020ರಲ್ಲಿ ಚಿಕ್ಕದೊಂದು ವೈರಸ್ ಜಗತ್ತನ್ನೇ ತಲ್ಲಣಗೊಳಿಸಿದ ವರ್ಷ. ಆದರೆ ಪ್ರಧಾನಿ ಮೋದಿ ಕ್ರಿಯಾಶೀಲ ಶಕ್ತಿಯಿಂದ ಭಾರತ ಸುಭದ್ರವಾಯಿತು. ಬೇರೇ ಬೇರೆ ದೇಶದಲ್ಲಿ ಲಕ್ಷ ಲಕ್ಷ ಸಾವುಗಳಾದವು ಆದರೆ ಪ್ರಧಾನಿ ಮೋದಿಯವರ ಒಂದೇ ಮಾತಿಗೆ ಜನ ಲಾಕ್ ಡೌನ್ ಪಾಲಿಸಿದರು. ಜಗತ್ತು ಹೇಗೆ ಕಟ್ಟಬೇಕನ್ನುವುದಕ್ಕೆ ಮೋದಿ ಕಾರಣ. ಅವರು ಪ್ರಧಾನಿಯಷ್ಟೇ ಅಲ್ಲ. ವಿಶ್ವಗುರು ಇದ್ದಂತೆ ಎಂದು ಬಣ್ಣಿಸಿದರು.

ತಾವು ಬೆಳೆದ ಧಾನ್ಯಗಳನ್ನು ರಾಶಿ ಮಾಡಿ ಊರಿನ ಬೇರೆ ಬೇರೆ ಶ್ರಮಿಕ ವರ್ಗಕ್ಕೂ ನೀಡಿ. ಉಳಿದದ್ದನ್ನು ಮನೆಗೆ ಕೊಂಡೊಯ್ಯುವ ಪಂಚಮಸಾಲಿ ಜನತೆ. ಸ್ವಾವಲಂಬಿ ಭಾರತ ಕಟ್ಟುವುದು ಮೋದಿಯವರ ಕನಸಾಗಿತ್ತು. ಇದಕ್ಕೆ ಪಂಚಮಸಾಲಿ ಸಮಾಜವೂ ಕೃಷಿಕ ವೃತ್ತಿ ಮೂಲಕ ಸ್ವಾವಲಂಬಿ ಜೀವನ ನಡೆಸುತ್ತಿದೆ ಎಂದು ಶ್ರೀಗಳು ನುಡಿದರು.

**ಸರ್ಕಾರದ ಹಣದಲ್ಲಿ ನಮ್ಮ ಉದ್ಧಾರ ಸಾಧ್ಯವಿಲ್ಲ:** ಸರ್ಕಾರದ ಹಣದಲ್ಲಿ ನಮ್ಮ ಉದ್ಧಾರ ಸಾಧ್ಯವಿಲ್ಲ. ನಮ್ಮ ಉದ್ಧಾರ ನಮ್ಮ ಕೈಯ್ಯಲಿದ್ದು ಜನರು ತಮ್ಮ ದುಡಿಮೆ ಜೊತೆಗೆ ಮಕ್ಕಳಿಗೆ ಕಡ್ಡಾಯ ಶಿಕ್ಷಣ ಮತ್ತು ಉತ್ತಮ ಸಂಸ್ಕಾರ ಕಲಿಸಿ ಎಂದು ತುಮಕೂರು ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಹೇಳಿದರು.

ಹರ ಜಾತ್ರಾ ಮಹೋತ್ಸವದಲ್ಲಿ ಆಶೀರ್ವಚನ ನೀಡಿದ ಅವರು, ಕುಟುಂಬದಲ್ಲಿ ಮಕ್ಕಳು ವಿದ್ಯಾವಂತರಾದರೆ ಸಮಾಜದಲ್ಲಿ ಅವರಿಗಾಗಿ ಉತ್ತಮ ಸ್ಥಾನ ಇರುತ್ತದೆ ಎಂಬುದನ್ನು ಜನರು ಅರ್ಥಮಾಡಿಕೊಳ್ಳಬೇಕೆಂದರು.

ಜಾತ್ರೆಗಳು ಕೇವಲ ಜನ ಸಂದಣಿಗಾಗಿ ಬಂದು ಹೋಗುವಂತಹದ್ದಲ್ಲ, ಜನ ಜಾಗೃತರಾಗಬೇಕು, ಎಲ್ಲರೂ ಒಂದೆಡೆ ಸೇರಿ ಬೇರೆಯಬೇಕೆಂಬ ಶ್ರೀಗಳ ಉದ್ದೇಶ ಸಾಕಾರಗೊಂಡಿದೆ ಎಂದು ನುಡಿದರು.

## ಹಡಗಲಿ ಹಳ್ಳಿಗಳನ್ನು ಹಾವೇರಿ ಜಿಲ್ಲೆಗೆ ಸೇರಿಸಿದರೆ 371 ಸೌಲಭ್ಯಕ್ಕೆ ಕಂಟಕ



ಹಗರಿಬೊಮ್ಮನಹಳ್ಳಿ, ಜ.14- ಬಳ್ಳಾರಿ ಜಿಲ್ಲೆ ವಿಭಜನೆ ವಿರೋಧಿ ಹೋರಾಟಗಾರ ಚಾಗನೂರು ಮಲ್ಲಿಕಾರ್ಜುನ ರೆಡ್ಡಿ ಹಡಗಲಿ, ಹರಪನಹಳ್ಳಿ ತಾಲ್ಲೂಕಿನ ಮೂಲೆಕಟ್ಟಿನ ಹಳ್ಳಿಗಳನ್ನು ಹಾವೇರಿ ಜಿಲ್ಲೆಗೆ ಸೇರಿಸಿ ಎಂದು ಹೇಳುವ ಮೂಲಕ ಪಶ್ಚಿಮ ತಾಲ್ಲೂಕಿನ ಹಳ್ಳಿಗಳ 371 ಜೆ ಸೌಲಭ್ಯ ಕಸಿಯುವ ಹುನ್ನಾರ ನಡೆಸಿದ್ದು ಖಂಡನೀಯ ಎಂದು ರಾಜ್ಯ ಕಾಂಗ್ರೆಸ್ ಮಾಧ್ಯಮ ವಕ್ತಾರ ಪತ್ರೇಶ್ ಹಿರೇಮಠ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪಟ್ಟಣದಲ್ಲಿ ಇಂದು ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಬಳ್ಳಾರಿ ನಗರದ ಜನತೆ ಜಿಲ್ಲೆ ರಚನೆಯಾದಾಗಿನಿಂದ ಪಶ್ಚಿಮ ತಾಲ್ಲೂಕುಗಳ ಸಾರ್ವಜನಿಕರ ಗೋಳನ್ನು ಆಲಿಸದೇ ಈಗ ಜಿಲ್ಲೆ ವಿಭಜನೆಯಿಂದ ವ್ಯಾಪಾರ, ವಹಿವಾಟು ಕುಸಿದು ಹೋಗುವ ಭಯದಿಂದ ತೋಳಲಾಡುತ್ತಿರುವುದು ಹಾಸ್ಯಾಸ್ಪದ ಎಂದು ಪತ್ರೇಶ್ ಲೇವಡಿ ಮಾಡಿದ್ದಾರೆ.

ಬಳ್ಳಾರಿ ಜಿಲ್ಲೆ ಅಖಂಡತೆ ಬಯಸುವ ವಿಭಜನೆ ವಿರೋಧಿ ಹೋರಾಟಗಾರರು ಹಡಗಲಿ ಹರಪನಹಳ್ಳಿ ತಾಲ್ಲೂಕಿನ ಹಳ್ಳಿಗಳನ್ನು ಹಾವೇರಿ ಜಿಲ್ಲೆಗೆ ಸೇರಿಸಿ ಎನ್ನುವುದು ಅವರ ಸ್ವಾರ್ಥವನ್ನು ಬಹಿರಂಗಗೊಳಿಸಿದಂತಾಗಿದೆ.

ಯಾವುದೇ ಕಾರಣಕ್ಕೂ ಪಶ್ಚಿಮ ತಾಲ್ಲೂಕುಗಳ ಹಳ್ಳಿಗಳನ್ನು ಹಾವೇರಿ ಜಿಲ್ಲೆಗೆ ಸೇರಿಸಬಾರದು. ಇದರಿಂದ 371 ಜೆ ಸೌಲಭ್ಯ ನಿಂತು ಹೋಗಿ ಹಳ್ಳಿಗಳ ಯುವಕರ ಭವಿಷ್ಯ ಹಾಳಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

## ಪೊದಾರ್ ಶಾಲೆಯಲ್ಲಿ ವಿವೇಕಾನಂದರ ಜಯಂತಿ



ದಾವಣಗೆರೆ, ಜ.14- ನಗರದ ಪೊದಾರ್ ಜಂಬೋಕಿಡ್ಸ್ ಹಾಗೂ ಪೊದಾರ್ ಇಂಟರ್‌ನ್ಯಾಷನಲ್ ಸ್ಕೂಲ್ ನಲ್ಲಿ ಶ್ರೀ ಸ್ವಾಮಿ ವಿವೇಕಾನಂದರ ಜಯಂತಿಯನ್ನು ಆಚರಿಸಲಾಯಿತು.

ಪ್ರಾಂಶುಪಾಲ ರಮೇಶ್ ಪಾಂಡ, ಮುಖ್ಯೋಪಾಧ್ಯಾಯಿನಿ ಶ್ರೀಮತಿ ಮೊನಾಲೀಸಾ ಸಿಂಗ್, ಶಿಕ್ಷಕಿಯರಾದ ಶ್ರೀಮತಿ ಮಂಗಳ ಮಲ್ಲಿಕಾರ್ಜುನ್, ವಿಷಿತ ಶಿವಕುಮಾರ್, ಕವಿತ ಮಲ್ಲಾಪುರ, ಹರ್ಷಿತ, ರೋಮಾ, ಕಲ್ಪನ, ಅಶ್ವಿನಿ, ಪದ್ಮಾವತಿ ತೋಫಿಕ್, ಆಡಳಿತ ಮಂಡಳಿಯವರಾದ ಸಾವನ್, ಶೃತಿ ಉಪಸ್ಥಿತರಿದ್ದರು. ಗೂಗಲ್ ಮೀಟ್‌ನಲ್ಲಿ ಮಕ್ಕಳು ವಿವೇಕಾನಂದರ ಹಿತ ನುಡಿಗಳನ್ನು ನುಡಿಗಳನ್ನಾಡಿದರು.


**ಸೈಟು, ಮನೆ ಖರೀದಿಗೆ ಬೇಕಾಗಿದೆ**
ಕೇವಲ (1/2%) ಅರ್ಧ ಪರ್ಸೆಂಟ್ ಕಮೀಷನ್‌ಗೆ ನಾವು ನಿಮ್ಮ ಸೈಟು, ಮನೆ ಮಾರಿಸಿಕೊಡುತ್ತೇವೆ.
ಕಿರಣ್ ಬೂಸ್ನೂರ್ : 98440-63409
(ಸೈಟು, ಮನೆ ಮಾರುವವರಿಗೆ ಮಾತ್ರ ಅನ್ವಯಿಸುತ್ತದೆ, ಕೊಳ್ಳುವವರಿಗಲ್ಲ*)

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 40x30 ಅಕ್ಕ-ಪಕ್ಕ ಪೂರ್ವ, 30x40 ಪಶ್ಚಿಮ, ಆಂಜನೇಯ ಬಡಾವಣೆಯಲ್ಲಿ 30x40 ಉತ್ತರ ಪೂರ್ವ ಕಾರ್ನರ್, ಡಾಲರ್ಸ್ ಕಾಲೋನಿಯಲ್ಲಿ 30x50 ಪೂರ್ವ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟ್‌ಗಳು ಮಾರಾಟಕ್ಕಿವೆ**
74x40 North East Croner ಮಹಾಲಕ್ಷ್ಮಿ ಲೇಔಟ್‌ನಲ್ಲಿ, 30x40, 30x40 East ಅಕ್ಕ-ಪಕ್ಕ ಸ್ವಾಮಿ ವಿವೇಕಾನಂದ ಬಡಾವಣೆ, ಪುಷ್ಪ ಮಹಾಲಿಂಗಪ್ಪ ಸ್ಕೂಲ್ ಹಿಂಭಾಗ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಹಾಲಿನ ಡೈರಿ ಫಾರಂ ಬಾಡಿಗೆಗೆ ಸಿಗುತ್ತದೆ**
ಹೊಸ ಬಿಸಲೇರಿ ರಸ್ತೆಯಲ್ಲಿ ಹಾಲಿನ ಡೈರಿ ಫಾರಂ ಬಾಡಿಗೆಗೆ ಸಿಗುತ್ತದೆ. ಸಂಪರ್ಕಿಸಿ :
ಮೊ.94489 66128

**ಮನೆ ಬಾಡಿಗೆಗೆ ಇವೆ**
ಎಸ್.ಎಸ್. ಬಡಾವಣೆ ಅಥಣಿ ಕಾಲೇಜ್ ಹತ್ತಿರ 4 ಬೆಡ್ ರೂಂ ಮನೆ. ವಿದ್ಯಾನಗರ ತರಳಬಾಳು ಬಡಾವಣೆಯಲ್ಲಿ 3 ಬೆಡ್‌ರೂಂ ಮನೆ
ಶಾಮನೂರು ಧನ್ಯಕುಮಾರ್
97415 62589
ಸ್ವಾಮಿ ಏಜೆಂಟ್,ವಿದ್ಯಾನಗರ
97421 44715

**ಗೋಡೌನ್ ಬಾಡಿಗೆಗಿದೆ**
ದಾವಣಗೆರೆ ಎಪಿಎಂಸಿ 'ಎ' ಬ್ಲಾಕ್ ನಲ್ಲಿ 45x100 ಅಳತೆಯ ಗೋಡೌನ್ ಬಾಡಿಗೆಗೆ ಇದೆ.
ಸಂಪರ್ಕಿಸಿ :
ಮೊ.94481-14684

**ಸೈಟ್‌ಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿ 30x50 ದಕ್ಷಿಣ, ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ 30x40 ಪೂರ್ವ, ರಶ್ಮಿ ಹಾಸ್ಟೆಲ್ ಹತ್ತಿರ ಸೈಟುಗಳು ಇವೆ.
ಮಂಜುನಾಥ್, ರಿಯಲ್ ಎಸ್ಟೇಟ್ ಏಜೆಂಟ್
98444 91792

**ಮನೆಗಳು ಮಾರಾಟಕ್ಕಿವೆ**
40x60 North 3 ಬೆಡ್ ರೂಂ, ಕುವೆಂಪು ಬಡಾವಣೆಯಲ್ಲಿ, S.S. layout 'B' ಬ್ಲಾಕ್ ನಲ್ಲಿ 35x46, 2 ಬೆಡ್‌ರೂಂ, North-East Corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**TO LET**
2 BHK House 1st Floor
# 2831 "Ganga"
4th main, 4th cross,
M.C.C. 'B' Block,
Davanagere -577004
Ph: 93799 20680

**WANTED**
Cashier, Sales girls
Computer Operator
ಸಂಪರ್ಕಿಸಿ:
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.

**ಡಾಲರ್ಸ್ ಕಾಲೋನಿಯಲ್ಲಿ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ**
40x60 East, 30x50 West, 30x50 East, 30x63, South west corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಮಾರಾಟಕ್ಕಿದೆ**
ಆಧುನಿಕ ಮತ್ತು ವಾಸ್ತು ವ್ಯವಸ್ಥೆ ಇರುವ 2 ಬೆಡ್ ರೂಂ , 30x50ರ ಸೈಟ್‌ನಲ್ಲಿ ಪಶ್ಚಿಮ ದಿಕ್ಕಿನ ಹೊಸ ಮನೆ ಬಾಲಾಜಿ ಬಡಾವಣೆಯಲ್ಲಿ ಮಾರಾಟಕ್ಕಿದೆ.
98448 82366

**ಬೇಕಾಗಿದ್ದಾರೆ**
ಅಕೌಂಟೆಂಟ್ ಹುದ್ದೆಗೆ ಲೇಡಿಸ್ ಬೇಕಾಗಿದ್ದಾರೆ. ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
94838 62779

**ಮನೆ ಬಾಡಿಗೆಗೆ ಇದೆ**
ಟಿ.ವಿ. ಸ್ಟೇಷನ್‌ಗೆ, ಸರ್.ಎಂ.ವಿ. ಕಾಲೇಜ್, ಶಶಿ ಸೋಪ್ ಫ್ಯಾಕ್ಟರಿಗೆ, ಹೈಟೆಕ್ ಆಸ್ಪತ್ರೆಗೆ ತುಂಬಾ ಹತ್ತಿರವಿರುವ ವಿಶಾಲವಾದ ಹಾಲ್, 2 ಬೆಡ್‌ರೂಂ, 2 ಬಾತ್‌ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಸದಾ ನೀರಿನ ವ್ಯವಸ್ಥೆ, ವಾಸ್ತು ಪ್ರಕಾರವಿರುವ ಮನೆ ಕ್ಲೀನ್ ಆಗಿ ಮನೆ ಇಟ್ಟುಕೊಳ್ಳುವವರಿಗೆ, ಹಿಂದೂ ಜನಕ್ಕೆ, ಆರೋಗ್ಯವಂತರಿಗೆ ಮಾತ್ರ ವಿಚಾರಿಸಿ.
99865 38099, 99806 11110

**Shops For Rent**
Measurement : 12x12, 14x24, Location: vidyanagara Main Road Opp Post office Buliding Davanagere.
Basavaraj
94483 93389

**WANTED**
1) Office Boy / Sales Rep -1
2) Driver - 1
Preferably Ritired
Scientific Fuel Injections
Near to Hotel Shoven (Kini Towers)
Near D.C. Office, P.B.Road,
Davangere-06. Ph : 08192-254724
Timings : 10 am to 6 pm

**ಡ್ರೈವರ್ ಬೇಕಾಗಿದ್ದಾರೆ**
Bolero ಗಾಡಿಗೆ ನುರಿತ ಡ್ರೈವರ್ ಬೇಕಾಗಿದ್ದಾರೆ.
ಸಂಪರ್ಕಿಸಿ:
88619 45934

**Home Loans**
House Purchase Loans, House Mortgage Loans, House Construction Loans, House Revenue Loans, Site Purchase Loans, Commercial Building Loans, Agricultur Loans, Car Loans & Other Loans
98455 87805

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಆಫೀಸ್ ಕಛೇರಿ ಬಾಡಿಗೆಗೆ**
20x40 ಅಳತೆಯ ಮೊದಲನೇ ಮಹಡಿಯಲ್ಲಿರುವ ಜಾಗ ಆಫೀಸ್/ಕಛೇರಿಗೆ ಬಾಡಿಗೆಗಿದೆ.
ಕೆ.ಟಿ.ಜೆ. ನಗರ 1ನೇ ಮೇನ್, 1ನೇ ಕ್ರಾಸ್, ದಾವಣಗೆರೆ
99166 31335

**ಮನೆ ಲೀಸ್‌ಗೆ ಇದೆ**
ಮೊದಲನೇ ಮಹಡಿ ವಾಸ್ತು ಪ್ರಕಾರ 3 BHK, ನೀರಿನ ಸೌಕರ್ಯ ಇರುವ ಮನೆ ಸಪ್ತಗಿರಿ ಹಾಸ್ಟೆಲ್ ಹಿಂಭಾಗ ಕುಂದವಾಡ ರಸ್ತೆ, ಬಸವೇಶ್ವರ ನಗರದಲ್ಲಿ ಲೀಸ್‌ಗೆ ಇರುತ್ತದೆ. ಸಂಪರ್ಕಿಸಿ:
98443 03551
94481 15270

**ಮನೆ+ರೂಂ ಬಾಡಿಗೆಗೆ**
ಉತ್ತರ ದಿಕ್ಕು 20x40 1ನೇ ಫ್ಲೋರ್ 2 BHK 2ನೇ ಫ್ಲೋರ್ ರೂಂ ಬಾಡಿಗೆ ಇದೆ. ESI ಹಾಸ್ಪಿಟಲ್ ಹತ್ತಿರ RVK ಸ್ಕೂಲ್ ಹಿಂಭಾಗ ನಿಟ್ಟುವಳ್ಳಿ ರೋಡ್ ದಾವಣಗೆರೆ. (ಸಸ್ಯಹಾರಿಗಳಿಗೆ)
81235 14203
85538 52275

**Male writer Requires**
Walk in Interview 4PM-7PM
Assistant
Minimum Qualification : Any Degree
Payment - 8000 to 9000
Address: S.M.S Steel Tredars
opp Church Complex, K.R. Road,
Davanagere-577001
98800 64464, 96686 68784

**"ಸೂರ್ಯ" ನವೋದಯ**
ರೆಗ್ಯುಲರ್ ಹೊಸ ಬ್ಯಾಚ್‌ಗಳು ಆರಂಭ
ಸಮಯ: ಸಂಜೆ : 5.30 ರಿಂದ 8-00
ಸ್ಥಳ : K.S.S. ಕಾಲೇಜು, ದುರ್ಗಾಂಬಿಕ ಹೈಸ್ಕೂಲ್ ಹತ್ತಿರ ಸರಸ್ವತಿ ಬಡಾವಣೆ.
ಸುರೇಶ್ ಪಿ. ಮುರಗಿ
99028 24909

**ಬೇಕಾಗಿದ್ದಾರೆ**
ಪಿಯುಸಿ ಪಾಸ್/ಫೇಲ್ ಆದ ಯುವತಿಯರು ಬೇಕಾಗಿದ್ದಾರೆ. ಕೆಲಸದ ಸಮಯ: 9 ರಿಂದ 6 ರವರೆಗೆ ವೇತನ : 4500/-. B.Com/ Tally, computer Knowledge ಇರುವ ಮಹಿಳೆ/ಯುವಕರು, ವೇತನ 8000/-
ಸಂಪರ್ಕಿಸಿ:
86602 35013

**Wanted Teachers**
1) English - MA B.Ed/ BA B.Ed- 5 No.s
2) Science - B.Sc B.Ed- 5 No.s
3) P.E.Teachers - C.P.Ed/ B.P.Ed- 2 No.s
4) D.Ed/ NTC English - 5 No.s
5) Clerk B.Com, Computers- 2 No.s
S N Public School
Harihar & Davangere
73493 97287

**ಲೀಸ್‌ಗೆ ಇದೆ**
ದೇವರಾಜ್ ಅರಸ್ 'ಬಿ' ಬ್ಲಾಕ್‌ನ 12 ನೇ ಕ್ರಾಸ್‌ನಲ್ಲಿರುವ # 380/3, ಶ್ರೀ ಕಾಕತಿ ಸಿದ್ದೇಶ್ವರ ನಿಲಯ ಒಂದನೇ ಮಹಡಿಯಲ್ಲಿ ಮನೆ 2 ಬೆಡ್ ರೂಂ 2 ಹಾಲ್‌ವುಳ್ಳ ಮನೆ ಲೀಸ್‌ಗೆ ಇರುತ್ತದೆ. ಸಸ್ಯಹಾರಿಗಳಿಗೆ ಮಾತ್ರ. ಸಂಪರ್ಕಿಸಿ:
98864 84216
99163 23302

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಹಾಲ್ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರೋಡ್, ಕಾರ್ನರ್ ಬಿಲ್ಡಿಂಗ್, ಮೇನ್ ರೋಡ್, ಮೊದಲನೇ ಮಹಡಿಯಲ್ಲಿ ಬಾಡಿಗೆಗೆ ಇದೆ.
ಸಂಪರ್ಕಿಸಿ:
82177 72482

**ಉಚಿತ 30 ಗಿಡಗಳು**
ಮದುವೆ ಮತ್ತು ಇತರೆ ಸಮಾರಂಭಗಳಿಗೆ ತಾಂಬೂಲವಾಗಿ ರಿಟರ್ನ್ ಗಿಫ್ಟ್ 30 ಹೂವಿನ ಗಿಡಗಳನ್ನು ಉಚಿತವಾಗಿ ನೀಡಲಾಗುವುದು.
ಸಂಪರ್ಕಿಸಿ:
94805 64551
91418 74551

**ಮಾರಾಟಕ್ಕೆ**
ಚಿಕ್ಕಮ್ಮಣಿ ದೇವರಾಜ ಅರಸು ಬಡಾವಣೆ 20×30, DCM ಮನೆ- 30×35, ಶ್ರೀರಾಮ ಬಡಾವಣೆ ಮನೆ ಡೂಪ್ಲೆಕ್ಸ್-20×30, ಸರಸ್ವತಿ ಬಡಾವಣೆ ಮನೆ- 30×40, 20×35, ತುಂಗಭದ್ರಾ ಬಡಾವಣೆ ಮನೆ-30×40, SS ಲೇಔಟ್ ಮನೆ-30×40, 30×47
78996 36597, 99165 25828

**SAHYADRI**
PARAMEDICAL COLLEGE
SSLC ಪಾಸ್, PUC ಪಾಸ್/ಫೇಲ್
Course DHI
Diploma Health Inspector
ಕೆಲವೇ ಸೀಟುಗಳು ಮಾತ್ರ, SBI ATM ಹತ್ತಿರ ರಾಂ & ಕೋ. ಸರ್ಕಲ್, ದಾವಣಗೆರೆ.
9019580600, 86601 95955

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು
ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠ್. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**JOBS**
MCS ACADEMY
Training &
Placement Cell
98444 92888

**DIPLOMA & BE TUITIONS**
For All Branches
ಸಮೃದ್ಧಿ ಕೋಚಿಂಗ್ ಅಕಾಡೆಮಿ
81472 62361

**PWD & NAVODAYA COACHING**
New Batches Started
ಸಮೃದ್ಧಿ ಕೋಚಿಂಗ್ ಅಕಾಡೆಮಿ
81472 62361

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**State Bank of India ಗ್ರಾಹಕರ ಸೇವಾ ಕೇಂದ್ರದಲ್ಲಿ**
ಜನ್‌ಧನ್ ಖಾತೆ ಮಾಡಲಾಗುತ್ತದೆ
('0' Account Open)
# 264/1 ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
99806 10005

**ತಕ್ಷಣ ಬೇಕಾಗಿದ್ದಾರೆ**
ಹೌಸಿಂಗ್ ಕೀಪಿಂಗ್ ಕೆಲಸಕ್ಕೆ ಮಹಿಳೆಯರು / ಪುರುಷರು (ಹುಡುಗರು 18-26 ರೊಳಗೆ)
S.N.A. Plaza Building
vinobanagara, 3rd main, P.B. Road, Davanagere.
91130 53483

# ನೀವುಂಟು, ಹೈಕಮಾಂಡ್ ಉಂಟು

## ಸಂಪುಟ ವಿಸ್ತರಣೆ ಬಗ್ಗೆ ಕಿಡಿ ಕಾರುತ್ತಿರುವವರಿಂದ ಕೈ ಕೊಡವಿಕೊಂಡ ಸಿಎಂ ಯಡಿಯೂರಪ್ಪ

ದಾವಣಗೆರೆ, ಜ. 14 - ನನ್ನ ಇತಿ ಮಿತಿಗಳಲ್ಲಿ ಸಚಿವ ಸಂಪುಟ ವಿಸ್ತರಣೆ ಮಾಡಿದ್ದೇನೆ ಎಂದಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, 10-12 ಜನ ಇಲ್ಲಿ ಆರೋಪ ಮಾಡುವ ಬದಲು ಕೇಂದ್ರದ ನಾಯಕರ ಬಳಿಗೆ ಹೋಗಿ ಮಾತನಾಡಲಿ ಎಂದು ಹೇಳುವ ಮೂಲಕ ಸಂಪುಟ ವಿಸ್ತರಣೆ ಅಸಮಾಧಾನ ವನ್ನು ಹೈಕಮಾಂಡ್ ಹೆಗಲಿಗೆ ಹಾಕಿದ್ದಾರೆ.

ಹರಿಹರದಲ್ಲಿ ಆರಂಭವಾದ ಹರ ಜಾತ್ರೆ ಸಮಾರಂಭದಲ್ಲಿ ಪಾಲ್ಗೊಳ್ಳಲು ಆಗಮಿಸಿದ ವೇಳೆ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಇಲ್ಲಿ ಹೇಳಿಕೆ ಕೊಡುವುದರ ಮೂಲಕ ಗೊಂದಲ ಉಂಟು ಮಾಡಿ, ವಾತಾವರಣ ಕೆಡಿಸುವ ಕೆಲಸ ಮಾಡುವುದು ಪಕ್ಷದ ಶಿಸ್ತಿಗೆ ಧಕ್ಕೆ ತಂದಂತಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ನನ್ನ ಇತಿಮಿತಿ ಒಳಗೆ ಏನು ಮಾಡೋಕೆ ಸಾಧ್ಯವೋ ಅದನ್ನು ಮಾಡಿದ್ದೇನೆ. 10-12 ಜನ ಮಂತ್ರಿ ಮಾಡಿಲ್ಲ ಎಂದು ಆರೋಪ ಮಾಡುತ್ತಿದ್ದಾರೆ. ಆದರೆ, ಅವರು ಏನೇ ಆರೋಪ ಇದ್ದರೂ ಕೇಂದ್ರದ ನಾಯಕರಿಗೆ ದೂರು ನೀಡಲು ಯಾರೂ ಅಡ್ಡಿ ಮಾಡಲ್ಲ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಕೇಂದ್ರದ ನಾಯಕರ ಅಪೇಕ್ಷೆಯಂತೆ ಒಂದು ಸಚಿವ ಸ್ಥಾನ ಖಾಲಿ ಇಟ್ಟುಕೊಂಡಿರುವುದಾಗಿಯೂ ಅವರು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

ಕೇಂದ್ರದ ನಾಯಕರ ಆಶೀರ್ವಾದ ತಮಗೆ ಇರುವುದರಿಂದ ಮುಂದಿನ ಎರಡು ವರ್ಷ ಉತ್ತಮ ಆಡಳಿತ ನಡೆಯಲಿದೆ ಎಂದೂ ಯಡಿಯೂರಪ್ಪ ಹೇಳಿದ್ದಾರೆ.

ರಾಜ್ಯದ ಅಭಿವೃದ್ಧಿಗೆ ವಿಶೇಷ ಗಮನ ಕೊಡುತ್ತೇನೆ. ಅದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಕೇಂದ್ರದ ನಾಯಕರ ಆಶೀರ್ವಾದ ನನ್ನ ಮೇಲಿದೆ. ಹಣಕಾಸಿನ ಇತಿಮಿತಿಯಲ್ಲಿ ಮಾರ್ಚ್‌ನಲ್ಲಿ ಒಳ್ಳೆಯ ರೈತಪರ ಬಜೆಟ್ ನೀಡಲು ಪ್ರಯತ್ನಿಸುತ್ತೇನೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ. ಆ ಮೂಲಕ ನಾಯಕತ್ವದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂಬ ಪರೋಕ್ಷ ಸಂದೇಶ ನೀಡಿದ್ದಾರೆ.

ಮುಖ್ಯಮಂತ್ರಿಯವರನ್ನು ಸಿ.ಡಿ. ಮೂಲಕ ಬ್ಲಾಕ್‌ಮೇಲ್ ಮಾಡಲಾಗಿದೆ ಎಂಬ ಆರೋಪದ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಏನೇ ಆರೋಪ ಮಾಡುವುದಿದ್ದರೂ ಕೇಂದ್ರದ ನಾಯಕರಿಗೆ ದೂರು ಕೊಡಲಿ ಎಂದಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ, ಸಂಸದ ಜಿ.ಎಂ. ಸಿದ್ದೇಶ್ವರ ಮತ್ತಿತರರು ಉಪಸ್ಥಿತರಿದ್ದರು.

# ಪಾದಯಾತ್ರೆ ಆರಂಭಿಸಿದ ಬಸವ ಜಯಮೃತ್ಯುಂಜಯ ಶ್ರೀ

## ತಮಗೆ ಬೆಂಬಲ ನೀಡಿದ ಸಮಾಜದ ಬೇಡಿಕೆ ಈಡೇರಿಸುವ ಜವಾಬ್ದಾರಿ ಸಿಎಂ ಮೇಲಿದೆ: ಶ್ರೀ



ಕೂಡಲ ಸಂಗಮ, ಜ.14- ಪಂಚಮಸಾಲಿ ಸಮಾಜದ ನಿಜಲಿಂಗಪ್ಪ, ಜತ್ತಿ, ಕಂಠಿ. ವೀರೇಂದ್ರ ಪಾಟೀಲ, ಜೆ.ಎಚ್. ಪಟೇಲರಿಗೆ ನೀಡದ ಬೆಂಬಲವನ್ನು ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ನೀಡಿದೆ. ಹೀಗಾಗಿ ಸಮಾಜದ ಪ್ರಮುಖ ಬೇಡಿಕೆಗಳನ್ನು ಈಡೇರಿಸುವ ಜವಾಬ್ದಾರಿ ಅವರ ಮೇಲಿದೆ ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮಿಜಿ ಹೇಳಿದರು.

ಪಂಚಮಸಾಲಿ ಸಮಾಜವನ್ನು 2ಎ ಮೀಸಲಾತಿಗೆ ಒಳಪಡಿಸಬೇಕೆಂದು ಒತ್ತಾಯಿಸಿ ಕೂಡಲಸಂಗಮದಿಂದ ಬೆಂಗಳೂರಿನವರೆಗೆ ಹಮ್ಮಿಕೊಂಡಿರುವ ಪಾದಯಾತ್ರೆಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಮ್ಮ ಸಮಾಜದ ಜನರಿಗೆ ಮಂತ್ರಿ, ನಿಗಮ ಮಂಡಳಿ ಸ್ಥಾನ ನೀಡುವುದು ನಮಗೆ ಬೇಕಿಲ್ಲ. ಬಹು ವರ್ಷಗಳ ಬೇಡಿಕೆಯಾದ 2ಎ ಮೀಸಲಾತಿ ಕಲ್ಪಿಸಬೇಕೆಂಬುದು ನಮ್ಮ ಹೋರಾಟ. ಇದನ್ನು ನಮ್ಮ ಪಾದಯಾತ್ರೆ ಮುಗಿಯುವ ದಿನಾಂಕದೊಳಗೆ ಈಡೇರಿಸಬೇಕು. ಇಲ್ಲದಿದ್ದರೆ, ಮಠಕ್ಕೆ ಸರ್ಕಾರ ನೀಡಿದ 4 ಕೋಟಿ ರೂ. ಹಣವನ್ನು ಮರಳಿಸುವುದಾಗಿ ಎಚ್ಚರಿಸಿದರು.

ಎಲ್ಲ ಸಮಾಜಗಳ ಹೋರಾಟ ಜನಪ್ರತಿನಿಧಿಗಳಿಂದ ನಡೆದಿದ್ದರೆ, ನಮ್ಮ ಹೋರಾಟ ಮಣ್ಣಿನ ಮಕ್ಕಳಿಂದ ಆರಂಭಗೊಂಡಿದೆ. ಶಿಕ್ಷಣ, ಉದ್ಯೋಗದಿಂದ ವಂಚಿತರಾಗಿರುವ ಈ ಸಮಾಜದ ಮಕ್ಕಳಿಗೆ 2ಎ ಮೀಸಲಾತಿ ಕಲ್ಪಿಸುವುದು ಅಗತ್ಯವಾಗಿದ್ದು, ಇದಕ್ಕಾಗಿ ತಾನು ಯಾವುದೇ ಹೋರಾಟಕ್ಕೂ ಸಿದ್ಧ ಎಂದರು.

ಲಿಂಗಾಯತ ಪಂಚಮಸಾಲಿ ಟ್ರಸ್ಟ್ ರಾಷ್ಟ್ರೀಯ ಅಧ್ಯಕ್ಷ, ಮಾಜಿ ಶಾಸಕ ವಿಜಯಾನಂದ ಕಾಶಪ್ಪನವರ ಮಾತನಾಡಿ, ಪಂಚಮಸಾಲಿ ಸಮಾಜಕ್ಕೆ 2ಎ. ಮೀಸಲಾತಿ ನೀಡುತ್ತೇನೆ ಎಂದು ಮಾತುಕೊಟ್ಟ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಈಗ ಮಾತು ತಪ್ಪುವ ಮೂಲಕ ವಚನ ಭ್ರಷ್ಟರಾಗಿದ್ದಾರೆ ಎಂದರು.

ಪಾದಯಾತ್ರೆಗೆ ಚಾಲನೆ ನೀಡಿದ ಶಾಸಕ ಬಸವನಗೌಡ ಪಾಟೀಲ ಯತ್ನಾಳ್, ಬಸವ ಜಯ ಮೃತ್ಯುಂಜಯ ಶ್ರೀಗಳು ಕೈಗೊಂಡ ಹೋರಾಟವನ್ನು ಹತ್ತಿಕ್ಕುವ ಕಾರ್ಯ ನಡೆದಿದೆ. ಆದರೆ ಈ ಹೋರಾಟ ಯಾವುದೇ ಕಾರಣಕ್ಕೂ ನಿಲ್ಲದು ಎಂದರು.

ಶ್ರೀ ಬಸವಜಯ ಮೃತ್ಯುಂಜಯ ಸ್ವಾಮಿಗಳು ಕೈಗೊಂಡ ಪಾದಯಾತ್ರೆಯ ಹಿಂದೆ ಅವರ ಮಠದ ಉದ್ಧಾರದ ಉದ್ದೇಶವಿಲ್ಲ. ಬದಲಾಗಿ ಪಂಚಮಸಾಲಿ ಸಮಾಜದ ಜನರ ಭವಿಷ್ಯ ಅಡಗಿದೆ. ಈ ಕಾರಣಕ್ಕೆ ಸಮಾಜದ ಜನರು ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವ ಮೂಲಕ ವಿಧಾನಸಭೆ ಮೂರನೆ ಮಹಡಿಯಲ್ಲಿ ಕುಳಿತ ಜನರ ಕಣ್ಣು ತೆರೆಸಬೇಕೆಂದು ಹೇಳಿದರು.

ಸರ್ಕಾರದ ಹಣ ಕೊಟ್ಟು ಮಠಗಳ ಖರೀದಿಗೆ ಮುಖ್ಯಮಂತ್ರಿ ಯಡಿಯೂರಪ್ಪ ಮುಂದಾಗಿದ್ದಾರೆ. ಪಂಚಮಸಾಲಿ ಮಠಕ್ಕೆ ಈ ಹಣ ಬೇಡ. ನಾವು ಜನರಿಂದ ಹಣ ಸಂಗ್ರಹಿಸಿ, ಮಠ ಕಟ್ಟುತ್ತೇವೆ ಎಂದರು.

ಶ್ರೀ ಸಿದ್ಧಲಿಂಗ ಸ್ವಾಮಿಜಿ, ಮಾಜಿ ಸಂಸದರಾದ ಮಂಜುನಾಥ ಕನ್ನೂರ ಹಾಗೂ ಶಿವರಾಮೇಗೌಡ, ಮಾಜಿ ಶಾಸಕರಾದ ರವಿಕಾಂತ ಪಾಟೀಲ, ನಂದಿಹಳ್ಳಿ ಹಾಲಪ್ಪ, ಶಶಿಕಾಂತ ನಾಯಿಕ, ಡಾ. ಸಾರ್ವಭೌಮ ಬಗಲಿ, ರವಿಕಾಂತ ಪಾಟೀಲ, ಸೋಮಣ್ಣ ಬೇವಿನಮರದ ಇತರರು ಇದ್ದರು.

## ಎಲೆಬೇತೂರಿನಲ್ಲಿ ಸಂಭ್ರಮದ ಸಂಕ್ರಾಂತಿ



ಎಲೆಬೇತೂರು, ಜ.14- ಗ್ರಾಮದ ರೈತ ಕುಟುಂಬದ ಸದಸ್ಯರಲ್ಲೂ ಅವರ ಅಡಿಕೆ ತೋಟದಲ್ಲಿ ಸಂಕ್ರಾಂತಿಯ ಪ್ರಯುಕ್ತ ವಿವಿಧ ಭಕ್ಷ್ಯ ಭೋಜನಗಳು ಅಂದರೆ ರೊಟ್ಟಿ, ಚಪಾತಿ, ಎಣಗಾಯಿ ಪಲ್ಯ, ಕಾಳಿನ ಪಲ್ಯ, ಶೇಂಗಾ, ಹುರುಗಡ್ಲೆ ಪುಡಿ ಚಟ್ನಿಗಳು, ಕೋಸುಂಬರಿ, ಈರುಳ್ಳಿ, ಸೌತೆಕಾಯಿ, ಕ್ಯಾರೆಟ್, ಹೆಸರುಬೇಳೆ ಪಾಯಸ, ಶಾವಿಗೆ ಪಾಯಸ, ಬುತ್ತಿ ಉಂಡೆ, ರೈಸ್ ಬಾತ್, ಚಿತ್ರಾನ್ನ, ಅನ್ನ ಸಾಂಬಾರ್, ಮೊಸರು ಅನ್ನ ಊಟವನ್ನು ಸವಿದರು. ನಂತರ ಅಡಿಕೆ ಎಲೆ ಸವಿದು ತೋಟವನ್ನು ಸುತ್ತಾಡಿ ಸಂಕ್ರಾಂತಿ ಸಂಭ್ರಮ ಆಚರಿಸಿದರು.

## ಜಿಲ್ಲಾಡಳಿತದಿಂದ ಸಿದ್ದರಾಮೇಶ್ವರ ಜಯಂತಿ



ದಾವಣಗೆರೆ, ಜ.14 - ಜಿಲ್ಲಾಡಳಿತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ದಾವಣಗೆರೆ ವತಿಯಿಂದ ಶ್ರೀ ಸಿದ್ದರಾಮೇಶ್ವರ ಜಯಂತಿ ಕಾರ್ಯಕ್ರಮವನ್ನು ಆಚರಿಸಲಾಯಿತು, ಜಿಲ್ಲಾ ಪಂಚಾಯತಿ ಉಪಾಧ್ಯಕ್ಷರಾದ ಶ್ರೀಮತಿ ಸಾಕಮ್ಮ ಗಂಗಾಧರ ನಾಯ್ಕ, ಅಪರ ಜಿಲ್ಲಾಧಿಕಾರಿ ಪೂಜಾರ ವೀರಮಲ್ಲಪ್ಪ, ಭೋವಿ ಸಮಾಜದ ಅಧಕ್ಷರಾದ ಬಿ.ಟಿ.ಸಿದ್ದಪ್ಪ, ಕಾರ್ಯಧ್ಯಕ್ಷರಾದ ಹೆಚ್. ಜಯಣ್ಣ ಮತ್ತು ಮುಖಂಡರಾದ ಡಿ.ಕೇಶವಮೂರ್ತಿ, ಹೆಚ್.ಬಸವರಾಜ್. ಜಿ.ಎಸ್. ಶ್ಯಾಮ್, ಹೆಚ್.ರುದ್ರೇಶ್, ಜೆ.ನಾಗರಾಜ್ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ಹಾಜರಿದ್ದರು.

# ಅಂತರ್ ಜಿಲ್ಲಾ ಮಟ್ಟದ ಲೆದರ್ ಬಾಲ್ ಕ್ರಿಕೆಟ್ ಟೂರ್ನಿ ನಗರದಲ್ಲಿ ಆರಂಭ



ದಾವಣಗೆರೆ, ಜ.14- ಕ್ರೀಡೆ ಹಾಗೂ ವಿದ್ಯಾಭ್ಯಾಸ ಎರಡೂ ಸಹ ಉಜ್ವಲ ಭವಿಷ್ಯಕ್ಕೆ ಪೂರಕವಾಗಿದ್ದು, ಅತ್ಯವಶ್ಯಕವೂ ಕೂಡ ಎಂದು ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಕ್ರೀಡಾಪಟುಗಳಿಗೆ ಕಿವಿಮಾತು ಹೇಳಿದರು.

ನಗರದ ಎಂಬಿಎ ಕಾಲೇಜು ಮೈದಾನದಲ್ಲಿ ಮಯೂರ ಕ್ರಿಕೆಟ್ ಕ್ಲಬ್ ವತಿಯಿಂದ ಸಂಕ್ರಾಂತಿ ಹಬ್ಬದ ಪ್ರಯುಕ್ತ ಹಮ್ಮಿಕೊಂಡಿರುವ ಇಂದಿನಿಂದ 6 ದಿನಗಳ ಆಹ್ವಾನಿತ ಅಂತರ್ ಜಿಲ್ಲಾ ಮಟ್ಟದ 16 ವರ್ಷದೊಳಗಿನ ಬಾಲಕರ ಲೆದರ್ ಬಾಲ್ ಕ್ರಿಕೆಟ್ ಟೂರ್ನಿಯನ್ನು ಬ್ಯಾಟ್ ಮಾಡುವ ಮೂಲಕ ಅವರು ಚಾಲನೆ ನೀಡಿದರು.

ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸುವ ಜೊತೆಗೆ ಕ್ರೀಡಾ ಚಟುವಟಿಕೆಗಳಲ್ಲೂ ನಿಮ್ಮನ್ನು ನೀವು ತೊಡಗಿಸಿಕೊಂಡರೆ ಸರ್ವಾಂಗೀಣ ಅಭಿವೃದ್ಧಿ ಕಾಣಬಹುದಾಗಿದೆ. ಆದ್ದರಿಂದ ಎರಡನ್ನೂ ಸಹ ಸಮನಾಗಿ ಸ್ವೀಕರಿಸಿ ಭವಿಷ್ಯ ರೂಪಿಸಿಕೊಳ್ಳುವಂತೆ ಕರೆ ನೀಡಿದರು.

25 ಓವರ್‌ಗಳ ಪಂದ್ಯಾವಳಿಯಲ್ಲಿ ಆರಂಭದ ದಿನವಾದ ಗುರುವಾರ ಎಲ್ಲ ಆರು ತಂಡಗಳು ತಲಾ ಒಂದು ಪಂದ್ಯವನ್ನು ಆಡಿದವು. ಬೆಳಿಗ್ಗೆ ದಾವಣಗೆರೆಯ ಯುನೈಟೆಡ್ ಕ್ರಿಕೆಟ್ ಕ್ಲಬ್ ಮತ್ತು ಚಿತ್ರದುರ್ಗದ ಮದಕರಿ ಕ್ರಿಕೆಟ್ ಕ್ಲಬ್ ನಡುವೆ ನಡೆದ ಪ್ರಥಮ ಪಂದ್ಯದಲ್ಲಿ ಚಿತ್ರದುರ್ಗದ ಮದಕರಿ ತಂಡ 54 ರನ್ನುಗಳಿಂದ ಜಯಗಳಿಸಿತು.

ದಾವಣಗೆರೆ ಕ್ರಿಕೆಟ್ ಅಕಾಡೆಮಿ ಮತ್ತು ವೀನಸ್ ಕ್ರಿಕೆಟ್ ಅಕಾಡೆಮಿ ನಡುವೆ ನಡೆದ ಎರಡನೇ ಪಂದ್ಯದಲ್ಲಿ ದಾವಣಗೆರೆ ಕ್ರಿಕೆಟ್ ಅಕಾಡೆಮಿ ಹುಡುಗರು 96 ಓಟಗಳಿಂದ ಜಯಭೇರಿ ಬಾರಿಸಿದರು. ತೌಫಿಕಿ ಅಹಮದ್ ಶತಕ ಸಿಡಿಸಿ ಎಲ್ಲರ ಗಮನ ಸೆಳೆದರು.

ತುಮಕೂರು ಮತ್ತು ಬಳ್ಳಾರಿ ತಂಡಗಳ ನಡುವೆ ನಡೆದ ಮತ್ತೊಂದು ಪಂದ್ಯದಲ್ಲಿ ತುಮಕೂರು ತಂಡ 112 ರನ್ ದಾಖಲಿಸಿದರೆ, ಬಳ್ಳಾರಿ ತಂಡ ಕೇವಲ 65 ರನ್ನುಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡು ಸೋಲು ಕಂಡಿತು. ತುಮಕೂರಿನ ನಿತಿನ್ 5 ಓವರ್ ನಲ್ಲಿ 14 ರನ್ ನೀಡಿ 6 ವಿಕೆಟ್ ಕಬಳಿಸಿ ಪಂದ್ಯ ಪುರುಷ ಪ್ರಶಸ್ತಿಗೆ ಭಾಜನರಾದರು. ಗೆದ್ದ ತಂಡಗಳಿಗೆ ತಲಾ 2 ಅಂಕ ದೊರೆಯಲಿದೆ. ಟೂರ್ನಿಯು ರೌಂಡ್ ರಾಬಿನ್ ಲೀಗ್ ಮಾದರಿಯಲ್ಲಿ ನಡೆಯುತ್ತಿದೆ.

ಪಂದ್ಯಾವಳಿಯ ಚಾಲನೆ ವೇಳೆ ಪಾಲಿಕೆ ಸದಸ್ಯ ದೇವರಮನೆ ಶಿವಕುಮಾರ್, ನಗರ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್, ಅಯೂಬ್ ಪೈಲ್ವಾನ್, ಎಲ್. ಎಂ. ಪ್ರಕಾಶ್, ತುಮಕೂರು ಲೋಕೇಶ್, ಕೆ. ಶಶಿಧರ್, ಅಶೋಕ್, ಮೋಹನ್ ರಾವ್, ಅನಿಲ್, ರೈತ ಸಂಘದ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್, ಸಿರಿಗೆರೆ ಉಮೇಶ್ ಸೇರಿದಂತೆ ಇತರರು ಇದ್ದರು.

## ನಗರದಲ್ಲಿ ನಾಳೆ ಅಂತರ ಜಿಲ್ಲಾ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ

ದಾವಣಗೆರೆ, ಜ. 14- ನಗರದ ಜಿಲ್ಲಾ ಅಮೆಚೂರ್ ಕಬ್ಬಡ್ಡಿ ಸಂಸ್ಥೆ, ಶ್ರೀ ಮೈಲಾರಲಿಂಗೇಶ್ವರ ಕ್ರೀಡಾ ಸಮಿತಿ, ನ್ಯೂ ಇಂಡಿಯಾ ಫ್ರೆಂಡ್ಸ್ ಗ್ರೂಪ್ ಇವರ ಸಂಯುಕ್ತಾಶ್ರಯದಲ್ಲಿ ಪುರುಷರ ಅಂತರ ಜಿಲ್ಲಾ ಮಟ್ಟದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿಯನ್ನು ಆಯೋಜಿಸಿದೆ.

ನಾಡಿದ್ದು ದಿನಾಂಕ 16 ಮತ್ತು 17ರಂದು ಬೆಳಗ್ಗೆ 9 ಗಂಟೆಗೆ ಪಂದ್ಯಗಳು ನಡೆಯಲಿವೆ. ಪ್ರಥಮ ಬಹುಮಾನ 15,000, ದ್ವಿತೀಯ ಬಹುಮಾನ 10,000 ರೂ., ತೃತೀಯ ಹಾಗೂ ಚತುರ್ಥ ಬಹುಮಾನ 5,000 ರೂ ಆಗಿರುತ್ತದೆ ಎಂದು ರುದ್ರೇಶ್ (9632825045), ಮಂಜುನಾಥ (7892662171) ತಿಳಿಸಿದ್ದಾರೆ.

## ಐವರು ಜೆಡಿಎಸ್ ಕಾರ್ಯಕರ್ತರ ಉಚ್ಚಾಟನೆ

ದಾವಣಗೆರೆ, ಜ.14 - ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದಾರೆಂಬ ಆರೋಪದ ಹಿನ್ನೆಲೆಯಲ್ಲಿ ಐವರು ಜೆಡಿಎಸ್ ಕಾರ್ಯಕರ್ತರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ.

ಪಕ್ಷದ ರಾಜ್ಯಾಧ್ಯಕ್ಷ ಹೆಚ್.ಕೆ. ಕುಮಾರಸ್ವಾಮಿ, ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಸೂಚನೆ ಮೇರೆಗೆ ಜಿಲ್ಲಾಧ್ಯಕ್ಷ ಬಿ. ಚಿದಾನಂದಪ್ಪ, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಅವರು ಹೆಚ್.ಸಿ. ಗುಡ್ಡಪ್ಪ, ಅನೀಸ್‌ಪಾಷ, ಸಂಗನಗೌಡ, ಜಸ್ಟಿನ್ ಜಯಕುಮಾರ್ ಹಾಗೂ ಗೋಣಿವಾಡ ಮಂಜುನಾಥ ಅವರುಗಳು ಉಚ್ಚಾಟಿಸಿದ್ದಾರೆ.


## ಲಂಚ ಆರೋಪ : ಸಿಬಿಐನ ನಾಲ್ವರು ಸಿಬ್ಬಂದಿ ವಿರುದ್ಧ ಪ್ರಕರಣ

ನವದೆಹಲಿ, ಜ. 14 – ಬ್ಯಾಂಕ್ ವಂಚನೆ ಪ್ರಕರಣ ಎದುರಿಸುತ್ತಿದ್ದ ಕಂಪನಿಯಿಂದ ಲಂಚ ಪಡೆದ ಆರೋಪದ ಮೇಲೆ ತನ್ನ ನಾಲ್ವರು ಸಿಬ್ಬಂದಿ ವಿರುದ್ಧ ಸಿ.ಬಿ.ಐ. ಪ್ರಕರಣ ದಾಖಲಿಸಿದೆ. ಪ್ರಕರಣ ದಾಖಲಿಸಲ್ಪಟ್ಟಿರುವವರಲ್ಲಿ ಇಬ್ಬರು ಡಿಎಸ್‌ಪಿಗಳು ಸೇರಿದ್ದಾರೆ.

ಘಾಜಿಯಾಬಾದ್‌ನಲ್ಲಿರುವ ಸಿಬಿಐ ತರಬೇತಿ ಕೇಂದ್ರ ಹಾಗೂ 13 ಇತರ ತಾಣಗಳ ಮೇಲೆ ದಾಳಿ ನಡೆಸಲಾಗಿದೆ. ಸಿಬಿಐ ತನ್ನ ಭವಿಷ್ಯದ ಅಧಿಕಾರಿಗಳನ್ನು ರೂಪಿಸುವ ಸಿಬಿಐ ಅಕಾಡೆಮಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಡಿ.ಎಸ್.ಪಿ. ಆರ್.ಕೆ. ರಿಶಿ ವಿರುದ್ಧ ತನಿಖೆ ನಡೆಸಲಾಗು ತ್ತಿದೆ. ಈ ಹಿನ್ನೆಲೆಯಲ್ಲಿ ಸಿಬಿಐ ಅಕಾಡೆಮಿ ಮೇಲೆಯೇ ದಾಳಿ ನಡೆಸುವ ಮುಜುಗರದ ಪರಿಸ್ಥಿತಿಯನ್ನು ತನಿಖಾ ಸಂಸ್ಥೆ ಎದುರಿಸುವಂತಾಗಿದೆ.

## ಕೊಮಾರನಹಳ್ಳಿಯಲ್ಲಿ ಹನುಮಪ್ಪನಿಗೆ ನೋಟಿನ ಅಲಂಕಾರ





ಮಲೇಬೆನ್ನೂರು, ಜ.14 - ಕೊಮಾರನಹಳ್ಳಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಧನುರ್ಮಾಸದ ಅಂಗವಾಗಿ ಕಳೆದ ಒಂದು ತಿಂಗಳಿನಿಂದ ಶ್ರೀ ಆಂಜನೇಯ ಸ್ವಾಮಿಗೆ ವಿಶೇಷ ಅಲಂಕಾರ ಹಾಗೂ ಪೂಜೆ ಮಾಡಿಕೊಂಡು ಬಂದಿದ್ದ ಅರ್ಚಕ ಶ್ರೀನಿವಾಸಚಾರ್ ಮತ್ತು ಅವರ ಮಕ್ಕಳಾದ ಧನಂಜಯ, ರಂಗನಾಥ್, ವರದಾ ಅವರು ಸಂಕ್ರಾಂತಿ ಹಬ್ಬದ ಅಂಗವಾಗಿ ಗುರುವಾರ ಸ್ವಾಮಿಗೆ 500, 100, 20,10 ರೂಪಾಯಿಗಳ ಹೊಸ ನೋಟುಗಳಿಂದ ಅಲಂಕಾರ ಮಾಡಿ ಗಮನ ಸೆಳೆದರು. ಅಲ್ಲದೇ, ದೇವಸ್ಥಾನದಲ್ಲಿ ಸಮಸ್ತ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

**ಪೊಂಗಲ್ ವಿತರಣೆ:** ಇಲ್ಲಿನ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ದೇವಸ್ಥಾನದಲ್ಲೂ ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಸ್ವಾಮಿಗೆ ವಿಶೇಷ ಪೂಜೆ ಅಭಿಷೇಕವನ್ನು ನೆರವೇರಿಸಿ ಭಕ್ತರಿಗೆ ಪೊಂಗಲ್ ಪ್ರಸಾದವನ್ನು ವಿತರಿಸಲಾಯಿತು.

ಮಲೇಬೆನ್ನೂರು ಪಟ್ಟಣದ ಗ್ರಾಮದೇವತೆ ಶ್ರೀ ಏಕನಾಥೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಸಂಕ್ರಾಂತಿ ಪ್ರಯುಕ್ತ ವಿಶೇಷ ಪೂಜೆ ಮಾಡಿ ಪೊಂಗಲ್ ವಿತರಣೆ ಮಾಡಿದರು.

## ಸಾಲಬಾಧೆ : ಮುದ್ದೇಬಿಹಾಳ ರೈತ ಆತ್ಮಹತ್ಯೆ

ದಾವಣಗೆರೆ, ಸೆ.14- ಸಾಲ ಬಾಧೆ ಹಿನ್ನೆಲೆಯಲ್ಲಿ ಮುದ್ದೇಬಿಹಾಳದ ರೈತನೋರ್ವ ತಾಲ್ಲೂಕಿನ ಯರಗುಂಟೆ ಗ್ರಾಮದ ಕೊಂಡಜ್ಜಿ ರಸ್ತೆಯಲ್ಲಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ.

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಆಲೂರು ಗ್ರಾಮದ ಮಲ್ಲಣ್ಣ ಬಸಪ್ಪ ಬಿರಾದರ್ (45) ಆತ್ಮಹತ್ಯೆ ಮಾಡಿಕೊಂಡ ರೈತ. 4 ಎಕರೆ ಜಮೀನಿನಲ್ಲಿ ಅಣ್ಣ-ತಮ್ಮಂದಿರ ಜೊತೆ ವ್ಯವಸಾಯ ಮಾಡಿಕೊಂಡಿದ್ದರು. ನಾಲ್ಕು ವರ್ಷಗಳ ಹಿಂದೆ ಪತ್ನಿ ಮೃತಪಟ್ಟಿದ್ದು, ನೊಂದುಕೊಂಡಿದ್ದರು. ಜಮೀನಿನಲ್ಲಿ ಬೆಳೆ ಬೆಳೆಯಲು ಬ್ಯಾಂಕ್ ಒಂದರಲ್ಲಿ 80 ಸಾವಿರ ಸಾಲ ಮಾಡಿದ್ದು, ಕಳೆದ ವರ್ಷ ಅತಿವೃಷ್ಟಿಯಿಂದ ಬೆಳೆ ನಾಶವಾಗಿತ್ತು. ಬ್ಯಾಂಕ್ ಸಾಲ ತೀರಿಸಲಾಗದೇ ಮನನೊಂದ ಮಲ್ಲಣ್ಣ ರಸ್ತೆಯಲ್ಲಿ ವಿಷ ಕುಡಿದಿದ್ದರು. ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದು, ಸ್ಥಳಕ್ಕೆ ಬಂದ ಪೊಲೀಸರು ಮಲ್ಲಣ್ಣ ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದ್ದರು. ಚಿಕಿತ್ಸೆಗೆ ಸ್ಪಂದಿಸದೇ ಬುಧವಾರ ಮೃತಪಟ್ಟಿದ್ದಾರೆ. ಈ ಸಂಬಂಧ ಗಾಂಧಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



**ಬಕ್ಕೇಶ್ವರ ಮಹಾಸ್ವಾಮಿಗೆ ಕಬ್ಬಿನ ಅಲಂಕಾರ**

ದಾವಣಗೆರೆ ಚೌಕಿಪೇಟೆಯಲ್ಲಿರುವ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿಗೆ ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಕಬ್ಬಿನ ಅಲಂಕಾರವನ್ನು ಮಾಡಲಾಗಿತ್ತು.

## ಸಂಕ್ರಾಂತಿ ಕವಿಗೋಷ್ಠಿ ಮುಂದೂಡಿಕೆ

ದಾವಣಗೆರೆ, ಜ.14 - ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ಮತ್ತು ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಮಕರ ಸಂಕ್ರಮಣ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ರಾಜ್ಯ ಮಟ್ಟದ ಸಂಕ್ರಾಂತಿ ಕವಿಗೋಷ್ಠಿಯನ್ನು ಕಾರಣಾಂತರದಿಂದ ಇದೇ ದಿನಾಂಕ 24ರ ಭಾನುವಾರಕ್ಕೆ ಮುಂದೂಡಲಾಗಿದೆ ಎಂದು ಕಲಾಕುಂಚದ ಸಂಸ್ಥಾಪಕರಾದ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ. ವಿವರಕ್ಕೆ ವ್ಯಾಟ್ಸಪ್ ಸಂಖ್ಯೆ 9538732777ರಲ್ಲಿ ಸಂಪರ್ಕಿಸಬಹುದು.

## ಮನೆಗಳ್ಳತನ : ಚಿನ್ನಾಭರಣ ಕಳವು

ದಾವಣಗೆರೆ, ಜ.14- ಮನೆಯೊಂದರಲ್ಲಿ ಕಳ್ಳತನ ನಡೆದಿದ್ದು, 63 ಸಾವಿರ ಮೌಲ್ಯದ ಚಿನ್ನಾಭರಣ, ನಗದು ಕಳವು ಮಾಡಿರುವ ಘಟನೆ ಇಲ್ಲಿನ ನಿಟುವಳ್ಳಿ ಹೊಸ ಬಡಾವಣೆಯಲ್ಲಿ ಬುಧವಾರ ರಾತ್ರಿ ನಡೆದಿದೆ.

ಬಡಾವಣೆಯ ವಾಸಿ ಶಬಾನಾ ಬೇಗಂ ಅವರ ಮನೆಯ ಬೀಗ ಮುರಿದು ಬೀರುವಿನಲ್ಲಿದ್ದ 50 ಸಾವಿರ ನಗದು, 8 ಸಾವಿರ ಮೌಲ್ಯದ ಚಿನ್ನದ ಗುಂಡು, 5 ಸಾವಿರ ಮೌಲ್ಯದ ಬೆಳ್ಳಿಯ ಕಾಲು ಚೈನ್ ಅನ್ನು ಕಳ್ಳರು ದೋಚಿದ್ದಾರೆ. ಈ ಸಂಬಂಧ ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನಗರಕ್ಕೆ ಇಂದು ಸಿದ್ದರಾಮಯ್ಯ



ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ. ಮಧ್ಯಾಹ್ನ 12.30 ಗಂಟೆಗೆ ಎಂ.ಬಿ.ಎ. ಕಾಲೇಜಿನ ಹೆಲಿಪ್ಯಾಡ್‌ಗೆ ಆಗಮಿಸಿ, ಹರಿಹರದಲ್ಲಿ ಶಾಸಕ ಎಸ್.ರಾಮಪ್ಪ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷದಿಂದ ಆಯೋಜಿಸಿರುವ ಗ್ರಾಮ ಪಂಚಾಯಿತಿ ಪ್ರಜಾಪ್ರತಿನಿಧಿಗಳ ಸನ್ಮಾನ ಸಮಾರಂಭದಲ್ಲಿ ಭಾಗವಹಿಸುವರು. ನಂತರ ಹರಿಹರದಲ್ಲಿ ನಡೆಯುತ್ತಿರುವ ಪಂಚಮಸಾಲಿ ಸಮಾಜದ ಹರ ಜಾತ್ರೆಯಲ್ಲಿ ಪಾಲ್ಗೊಳ್ಳುವರು. ನಂತರ ಸಂಜೆ 4.30ಕ್ಕೆ ದಾವಣಗೆರೆ ಎಂ.ಬಿ.ಎ. ಕಾಲೇಜಿನ ಹೆಲಿಪ್ಯಾಡ್‌ಗೆ ಆಗಮಿಸಿ, ಬೆಂಗಳೂರಿಗೆ ತೆರಳುವರು ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

SCIENCE ACADEMY (R.)
(A UNIQUE CENTRE FOR P.U. CLASSES)
# 307/2B, 1st FLOOR, 2ND MAIN, P.J. EXTN, NEAR STADIUM, DAVANGERE – 4
ADMISSION STARTED FOR
II PUC SCIENCE
PCMB TUTIONS
Classes starts from 20th January 2021
For more Details contact: Office: 08192 – 257546,
Mobile: 9980368779, 9448178087.
"We don't have any other branches in Davangere in the name of Academy"

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಬಾತಿ ಗ್ರಾಮದ ರೀ.ಸರ್ವೆ ನಂ.149/2ಪಿ, ವಿಸ್ತೀರ್ಣ:ಎಕರೆ-ಇಲ್ಲಾ, ಗುಂಟೆ-ಹತ್ತು [00-10] ಉಳ್ಳ ಜಮೀನು ಒಂದು ಮತ್ತು ದೊಡ್ಡಬಾತಿ ಗ್ರಾಮದ ರೀ.ಸರ್ವೆ ನಂ.149/2ಪಿ, ವಿಸ್ತೀರ್ಣ:ಎಕರೆ-ಇಲ್ಲಾ, ಗುಂಟೆ-ಹತ್ತು [00-10] ಉಳ್ಳ ಜಮೀನು ಒಂದು. ಈ ಎರಡೂ ಸೊತ್ತುಗಳು ಒಂದಕ್ಕೊಂದು ಲಗತ್ತಾಗಿದ್ದು, ಇವುಗಳ ಚಾಲ್ತಿ ರೀ.ಸರ್ವೆ ನಂ.149/20, ಒಟ್ಟು ವಿಸ್ತೀರ್ಣ:00-20 ಗುಂಟೆ ಉಳ್ಳ ಜಮೀನನ್ನು ದಾವಣಗೆರೆ ಸಿಟಿ ವಾಸಿ ಶ್ರೀಮತಿ ಚಂದ್ರಮ್ಮ ಕೋಂ. ವೀರಭದ್ರಪ್ಪ ಎಲ್.ಜಿ. ಇವರಿಂದ ಕ್ರಯಕ್ಕೆ ಪಡೆದುಕೊಂಡು ಕ್ರಯದ ಕರಾರು ಪತ್ರವನ್ನು ಬರೆಯಿಸಿಕೊಂಡು ಮುಂಗಡ ಹಣವನ್ನು ಕೊಟ್ಟಿರುತ್ತಾರೆ. ಮುಂದೆ ಕ್ರಯಪತ್ರವನ್ನು ರಿಜಿಸ್ಟರ್ ಮಾಡಿಸಿಕೊಳ್ಳುವವರಿರುತ್ತಾರೆ. ಆದುದರಿಂದ ಮೇಲ್ಕಂಡ ಜಮೀನಿನ ವಿಚಾರದಲ್ಲಿ ಯಾರಾದರೂ ಆಕ್ಷೇಪಣೆಗಳು, ತಂಟೆ ತಕರಾರುಗಳು, ಹಕ್ಕುಗಳು ವಗೈರೆ ಇದ್ದಲ್ಲಿ ಪ್ರಕಟಣೆಯ ದಿನಾಂಕದಿಂದ ಒಂದು ವಾರದೊಳಗಾಗಿ ಲಿಖಿತವಾಗಿ ನಮಗೆ ಮಾಹಿತಿ ನೀಡಲು ಈ ಮೂಲಕ ತಿಳಿಸಲಾಗಿದೆ. ಇಲ್ಲವಾದಲ್ಲಿ ಯಾವುದೇ ತಂಟೆ, ತಕರಾರು ಇರುವುದಿಲ್ಲವೆಂದು ಭಾವಿಸಿ ನೊಂದಾಯಿಸಿಕೊಳ್ಳಲಾಗುವುದು. ಮುಂದೆ ಬರುವ ಯಾವುದೇ ತಕರಾರುಗಳಿಗೆ ನಮ್ಮ ಕಕ್ಷಿದಾರರು ಜವಾಬ್ದಾರರಲ್ಲ ಎಂಬುದಾಗಿ ಈ ಮೂಲಕ ಸಾರ್ವಜನಿಕ ಪ್ರಕಟಣೆ ನೀಡಿದೆ.

ಕಕ್ಷಿದಾರರ ಪರ ಪ್ರಕಟಣೆ ನೀಡಿದ ವಕೀಲರು,
ದಿನಾಂಕ: 13.01.2021
ಸ್ಥಳ: ದಾವಣಗೆರೆ
**ಕೊಟ್ರೇಶ್ ಎಂ. [ಕೊಟ್ರೇಶ್ ಮಳೆಮಠ]**
ಬಿ.ಎ. ಬಿ.ಪಿ.ಇಡಿ., ಎಲ್ ಎಲ್‌ಬಿ,
ವಕೀಲರು, ಮನೆ ನಂ.4758/33, 'ಶ್ರೀ ಗುರು ನಿಲಯ',
4ನೇ ಮೇನ್, 2ನೇ ಕ್ರಾಸ್, ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್,
ದಾವಣಗೆರೆ-577004. ಮೊಬೈಲ್ ಸಂಖ್ಯೆ:94485 40161

ಬೇಕಾಗಿದ್ದಾರೆ / WANTED

MS EXCEL/ WORD, EXCELನ ಫಾರ್ಮುಲಾಗಳಲ್ಲಿ
**ಪರಿಣಿತರು, ಡಾಟಾ ಎಂಟ್ರಿ ಆಪರೇಟರ್ ಬೇಕಾಗಿದ್ದಾರೆ.**
**ಆಕರ್ಷಕ ಸಂಬಳ, ಭತ್ಯೆ, ESI ಹಾಗೂ PF ಸೌಲಭ್ಯಗಳಿವೆ.**

**Required experienced candidate with Knowledge in MS EXCEL formulas and reporting.**
**Attractive Salary, ESI and PF will be provided.**
**Intrested candidate please contact.**

ಸ್ಥಳ: **ಎ.ಕೆ. ಫಾರ್ಮ**
ತರಳಬಾಳು ಶಾಲೆ ಎದರು, ಹದಡಿ ರಸ್ತೆ, ದಾವಣಗೆರೆ.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು ದಾವಣಗೆರೆ ಸಿಟಿ, ಮ್ಯಾಸಬೇಡರ ಕೇರಿ, ಉರ್ದು ಶಾಲೆಯ ಹಿಂಭಾಗ, ಡೋರ್ ನಂ. 402/1, ಅಳತೆ: 11×44 ಅಡಿ ಉಳ್ಳ, ಆರ್.ಸಿ.ಸಿ. ರೂಫಿಂಗ್ ಇಲ್ಲಿ ವಾಸವಾಗಿರುವ ಶ್ರೀ ಹೆಚ್. ಎನ್. ಪ್ರಕಾಶ್ ಬಿನ್ ಲೇಟ್ ಹೆಚ್.ಎ. ನಾಗಪ್ಪ ಮತ್ತು ದಾವಣಗೆರೆ ಸಿಟಿ ಆನೆಕೊಂಡ ಡೋರ್ ನಂ. 358ರಲ್ಲಿ ವಾಸವಾಗಿರುವ ಶ್ರೀ ಎ. ಪ್ರದೀಪ್ ಕುಮಾರ್ ಬಿನ್ ಲೇಟ್ ಬಿ. ರುದ್ರಪ್ಪ ಇವರಿಂದ ಈ ಕೆಳಗಿನ ಪರಿಶಿಷ್ಟದಲ್ಲಿ ವಿವರಿಸಿರುವ ಸ್ವತ್ತನ್ನು ಕ್ರಯಕ್ಕೆ ಪಡೆಯುವ ಇಚ್ಛೆ ಹೊಂದಿರುತ್ತಾರೆ. ಪರಿಶಿಷ್ಟ ಸ್ವತ್ತಿನ ಖರೀದಿ ವ್ಯವಹಾರಕ್ಕೆ ಸಂಭಂದಿಸಿದಂತೆ ಯಾರದಾದರೂ ತಕರಾರು ಇದ್ದಲ್ಲಿ ಅದಕ್ಕೆ ಸಂಬಂಧಿಸಿದ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ನ್ಯಾಯವಾದಿಗಳನ್ನು ಈ ಪ್ರಕಟಣೆಯ ದಿನಾಂಕದಿಂದ **ಹದಿನೈದು ದಿನಗಳ** ಒಳಗಾಗಿ ಸಂಜೆ 6-30 ರಿಂದ ರಾತ್ರಿ 10-30 ರ ಸಮಯದಲ್ಲಿ ಸಂಪರ್ಕಿಸತಕ್ಕದ್ದು. ಹದಿನೈದು ದಿನಗಳ ನಂತರ ಬಂದಂತಹ ದಾಖಲಾತಿಗಳನ್ನು/ ತಕರಾರುಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಒಂದು ಪಕ್ಷ ಹದಿನೈದು ದಿನಗಳ ಒಳಗಾಗಿ ಯಾವುದೇ ತಕರಾರು ಬರದಿದ್ದಲ್ಲಿ, ಪರಿಶಿಷ್ಟ ಸ್ವತ್ತಿನ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಪರಿಶಿಷ್ಟ ಆಸ್ತಿಯನ್ನು ಖರೀದಿಸಲಾಗುವುದು.

**ನ್ಯಾಯವಾದಿಗಳ ಸಂಪರ್ಕಿಸಬೇಕಾದ ವಿಳಾಸ:**
ಎಸ್. ಜಿ. ಮಹಾವೀರ್, ಸ್ವಾಮಿ ಕೆ. ಜಿ. ಕೆ.
**ನ್ಯಾಯವಾದಿಗಳು**, ನಂ. 417/4ಎ, 4ಬಿ, **'ಲಾ ಸಲ್ಯೂಷನ್ಸ್'**
1ನೇ ಮಹಡಿ, ಬೆನಕೇಶ್ ಪ್ಲಾಜಾ, ಜನತಾವಾಣಿ ಕಛೇರಿ ಎದುರು,
ದಿಕ್ಷಿತ್ ರಸ್ತೆ, ಕೆ. ಬಿ. ಬಡಾವಣೆ, ದಾವಣಗೆರೆ [ಸಂ.ದೂ] 94816-71954.

**ಪರಿಶಿಷ್ಟ** : ದಾವಣಗೆರೆ ಸಿಟಿ, ಮ್ಯಾಸಬೇಡರ ಕೇರಿ, ಉರ್ದು ಶಾಲೆಯ ಹಿಂಭಾಗ, ಡೋರ್ ನಂ. 402/1, ಅಳತೆ: 11 × 44 ಅಡಿ ಉಳ್ಳ ಆರ್. ಸಿ. ಸಿ. ರೂಫಿಂಗ್, ಎ.ಇ.ಹೆಚ್. ವಿದ್ಯುಚ್ಛಕ್ತಿ, ಮಹಾನಗರ ಪಾಲಿಕೆಯ ನಲ್ಲಿ ನೀರು ಹಾಗೂ ಶೌಚಾಲಯ, ಸೌಕರ್ಯವನ್ನೊಳಗೊಂಡ ಗ್ರೌಂಡ್ ಮತ್ತು 1ನೇ ಮಹಡಿಯಲ್ಲಿ ಬರತಕ್ಕ ವಾಸದ ಮನೆಗೆ ಚಕ್ಕುಬಂದಿ. ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಚರಂಡಿ, ಉತ್ತರಕ್ಕೆ : ಮಹಬೂಬ್ ಬೀ ಇವರ ಸೊತ್ತು, ದಕ್ಷಿಣಕ್ಕೆ : ಸೈಯದ್ ಸಲೀಂ ಇವರ ಸೊತ್ತು.



## ಕೊರೊನಾ ಆತಂಕವಿಲ್ಲದೇ, ತುಂಗಭದ್ರಾ ನದಿ ತೀರದಲ್ಲಿ ಸಡಗರದ ಸಂಕ್ರಾಂತಿ

ಹರಿಹರ, ಜ.14 - ನಗರದಲ್ಲಿ ಸಡಗರ ಸಂಭ್ರಮದಿಂದ ಸಂಕ್ರಾಂತಿ ಹಬ್ಬವನ್ನು ಇಂದು ಆಚರಿಸಲಾಯಿತು.

ತುಂಗಭದ್ರಾ ನದಿಗೆ ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ಬಳ್ಳಾರಿ ಮುಂತಾದ ಜಿಲ್ಲೆಗಳಿಂದ ಸಹಸ್ರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಮತ್ತು ರೈತಾಪಿ ವರ್ಗದ ಜನರ ದಂಡು ಆಗಮಿಸಿ ನದಿಯಲ್ಲಿ ಸ್ನಾನ ಮಾಡಿ, ನಂತರದಲ್ಲಿ ವಿಶೇಷವಾದ ಪೂಜೆಯನ್ನು ಸಲ್ಲಿಸಿ ತದನಂತರದಲ್ಲಿ ತಾವುಗಳು ತಂದಿದ್ದ ವಿವಿಧ ಬಗೆಯ ರೊಟ್ಟಿ, ಪಲ್ಯ, ಚಟ್ನಿ, ಬುತ್ತಿ, ಚಿತ್ರಾನ್ನ, ಸೇರಿದಂತೆ ವಿಶೇಷ ಅಡುಗೆಯನ್ನು ಸೇವಿಸಿ ಸಡಗರ ಸಂಭ್ರಮದಿಂದ ಮಕರ ಸಂಕ್ರಾಂತಿ ಹಬ್ಬವನ್ನು ಆಚರಣೆ ಮಾಡಿದರು. ಸಾರ್ವಜನಿಕರು ಕೊರೊನಾದ ಭಯವನ್ನು ಬಿಟ್ಟು ಯಾವುದೇ ಆತಂಕವನ್ನು ಪಟ್ಟುಕೊಳ್ಳದೆ ಸಂಕ್ರಾಂತಿಯ ಹಬ್ಬವನ್ನು ಆಚರಣೆ ಮಾಡಿದರು. ಬಿಸಿಲನ ತಾಪವನ್ನು ನೀಗಿಸಲು ಕಲ್ಲಂಗಡಿ, ಕಬ್ಬಿನ ಜ್ಯೂಸ್ , ತಂಪಾದ ಪಾನಿಯ ಅಂಗಡಿಗಳು, ಹೋಟೆಲ್ ಮುಂತಾದ ವ್ಯಾಪಾರಿ ಕೇಂದ್ರಗಳನ್ನು ತೆರೆದು ಜನತೆಯ ದಗೆಯನ್ನು ನೀಗಿಸಿದವು. ತುಂಗಭದ್ರಾ ನದಿಗೆ ಆಗಮಿಸಿದ ಜನರು ನದಿಯ ಪಕ್ಕದ ಅಯ್ಯಪ್ಪ ಸ್ವಾಮಿ, ಆಂಜನೇಯ ಸ್ವಾಮಿ, ಹರಿಹರೇಶ್ವರ ಸ್ವಾಮಿ ದೇವಸ್ಥಾನ, ರಾಘವೇಂದ್ರ ಸ್ವಾಮಿ ಮಠ ಮುಂತಾದ ದೇವಸ್ಥಾಗಳಿಗೆ ಭೇಟಿ ನೀಡಿ ದೇವರ ಆಶೀರ್ವಾದ ಪಡೆದುಕೊಂಡರು.

### ಸಿ.ಡಿ. ಇರುವ ಮೂವರಿಗೆ ಸಚಿವ ಸ್ಥಾನ ಸಿಕ್ಕಿದೆ ಎಂದ ಯತ್ನಾಳ್

# ಸಚಿವ ಸ್ಥಾನದಲ್ಲಿ ಸಿ.ಡಿ. ಕೋಟಾ



ಬಾಗಲಕೋಟೆ, ಜ. 14 - ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಸಂಬಂಧಿಸಿದ ಸಿ.ಡಿ. ಇಟ್ಟು ಕೊಂಡು ಮೂವರು ಸಚಿವರಾಗಿದ್ದಾರೆ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಗಂಭೀರವಾಗಿ ಆರೋಪಿಸಿದ್ದಾರೆ.

ಕೂಡಲಸಂಗಮದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಡಿಯೂರಪ್ಪ ಅವರಿಗೆ ಸೇರಿರುವ ಆಕ್ಷೇಪಾರ್ಹ ಸಿ.ಡಿ. ಇದೆ. ಅವರ ಮೊಮ್ಮಗನೇ ಸಿ.ಡಿ. ಮಾಡಿದ್ದಾನೆ. ಅದು ನನ್ನ ಬಳಿ ಇದ್ದಿದ್ದರೆ ನಾನು ಉಪಮುಖ್ಯಮಂತ್ರಿ ಆಗಿರುತ್ತಿದ್ದೆ ಎಂದು ಹೇಳಿದ್ದಾರೆ.

ಈ ಹಿಂದೆ ಪಕ್ಷಕ್ಕಾಗಿ ದುಡಿದವರಿಗೆ ಸಚಿವ ಸ್ಥಾನದ ಕೋಟಾ, ಜಿಲ್ಲೆ ಕೋಟಾ ಇತ್ತು. ಈಗ ಬ್ಲಾಕ್‌ಮೇಲ್ ಮಾಡುವವರಿಗೆ, ಸಿ.ಡಿ. ಇಟ್ಟುಕೊಂಡವರಿಗೆ ಕೋಟಾ ಇದೆ ಎಂದವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಿ.ಡಿ. ಇಟ್ಟುಕೊಂಡ ಮೂರು ಜನ ಕೆಲ ದಿನಗಳ ಹಿಂದೆ ನನ್ನನ್ನು ಭೇಟಿ ಮಾಡಿ ಮುಖ್ಯಮಂತ್ರಿ ಯಡಿಯೂರಪ್ಪ ಪದಚ್ಯುತಿಗೆ ಕೈ ಜೋಡಿಸುವಂತೆ ಕೇಳಿದ್ದರು. ಈಗ ಅವರೇ ಸಚಿವ ಸಂಪುಟ ಸೇರಿದ್ದಾರೆ ಎಂದು ಯತ್ನಾಳ್ ಹೇಳಿದ್ದಾರೆ.

## ನಗರಕ್ಕೆ ಇಂದು ಪುನೀತ್ ರಾಜಕುಮಾರ್, ಮುನಿರತ್ನ



ಹೆಸರಾಂತ ಚಿತ್ರ ನಟ ಪುನೀತ್ ರಾಜಕುಮಾರ್ ಮತ್ತು ನಿರ್ಮಾಪಕ ಮುನಿರತ್ನ ಅವರುಗಳು ಇಂದು ಬೆಳಿಗ್ಗೆ 10 ಗಂಟೆಗೆ ನಗರಕ್ಕೆ ಆಗಮಿಸಲಿದ್ದಾರೆ ಎಂದು ನಿರ್ಮಾಪಕ ಮೇಕಾ ಮುರುಳೀ ಕೃಷ್ಣ ತಿಳಿಸಿದ್ದಾರೆ. ಬೆಂಗಳೂರಿನಿಂದ ಹೆಲಿಕ್ಯಾಪ್ಟರ್ ಮೂಲಕ ಜಿಎಂಐಟಿ ಹೆಲಿಪ್ಯಾಡಿಗೆ ಆಗಮಿಸುವ ಅವರು, ಹರಿಹರದಲ್ಲಿ ನಡೆಯುತ್ತಿರುವ ಪಂಚಮ ಸಾಲಿ ಪೀಠದ ಹರ ಜಾತ್ರೋತ್ಸವದಲ್ಲಿ ಪಾಲ್ಗೊಳ್ಳುವರು. ನಂತರ ಮಧ್ಯಾಹ್ನ 12.30ರ ವೇಳೆಗೆ ಹೆಲಿಪ್ಯಾಡಿಗೆ ಆಗಮಿಸಿ, ಬೆಂಗಳೂರಿಗೆ ಪ್ರಯಾಣಿಸುವರು.

## 31ಕ್ಕೆ ಪೋಲಿಯೋ

ನವದೆಹಲಿ, ಜ. 14 - ಐದು ವರ್ಷದೊಳಗಿನ ಮಕ್ಕಳಿಗೆ ಇದೇ ದಿನಾಂಕ 31ರಂದು ದೇಶಾದ್ಯಂತ ಪೋಲಿಯೋ ಲಸಿಕೆ ನೀಡಲಾಗುವುದು. ಈ ಹಿಂದೆ ಜನವರಿ 17ರಂದು ದೇಶಾದ್ಯಂತ ಪಲ್ಸ್ ಪೋಲಿಯೋ ಅಭಿಯಾನ ನಡೆಸಬೇಕಿತ್ತು. ಆದರೆ, ಕೊರೊನಾ ಲಸಿಕೆಗೆ ಜನವರಿ 16 ರಂದು ಪ್ರಧಾನಿ ಮೋದಿ ಚಾಲನೆ ನೀಡಲಿರುವ ಹಿನ್ನೆಲೆಯಲ್ಲಿ ಪೋಲಿಯೋ ಅಭಿಯಾನವನ್ನು ಜನವರಿ 31ಕ್ಕೆ ಮುಂದೂಡಲಾಗಿದೆ.

## ಗಣರಾಜ್ಯೋತ್ಸವಕ್ಕೆ ಮುಖ್ಯ ಅತಿಥಿಗಳಿಲ್ಲ

ನವದೆಹಲಿ, ಜ. 14 – ಕೊರೊನಾ ಕಾರಣದಿಂದಾಗಿ ಈ ವರ್ಷ ಗಣರಾಜ್ಯೋತ್ಸವದಲ್ಲಿ ಯಾವುದೇ ವಿದೇಶಿ ಅತಿಥಿ ಇರುವುದಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಐದು ದಶಕಗಳಲ್ಲಿ ಗಣರಾಜ್ಯೋತ್ಸವಕ್ಕೆ ಮುಖ್ಯ ಅತಿಥಿ ಪಾಲ್ಗೊಳ್ಳದೇ ಇರುವುದು ಇದೇ ಮೊದಲ ಬಾರಿ.

ಬ್ರಿಟನ್ ಪ್ರಧಾನ ಮಂತ್ರಿ ಬೋರಿಸ್ ಜಾನ್ಸನ್ ಅವರು ಕೊರೊನಾ ಹಿನ್ನೆಲೆಯಲ್ಲಿ ಕೊನೆ ಕ್ಷಣದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲು ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದರು.

ಬೇಕಾಗಿದ್ದಾರೆ
ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ:
ಶಾಂತಲಾ ವೆಡ್ಡಿಂಗ್ ಮಾಲ್
ಚಾಮರಾಜಪೇಟೆ, ದಾವಣಗೆರೆ-577001
96861 95327

ಭಾರತದ ಪ್ರತಿಷ್ಠಿತ ಹಣಕಾಸು ಸಂಸ್ಥೆಯಲ್ಲಿ ಸುವರ್ಣಾವಕಾಶ
ನಿವೃತ್ತ, ಸ್ವಯಂನಿವೃತ್ತ, ಸರ್ಕಾರಿ, ಬ್ಯಾಂಕುಗಳ ಸ್ವಯಂಉದ್ಯೋಗಿ, ಗೃಹಿಣಿಯರಿಗೆ, ಹಿರಿಯ ನಾಗರೀಕರಿಗೆ, ವೃತ್ತಿಪರರಿಗೆ ಮತ್ತು ನಿವೃತ್ತ ಸೈನಿಕರಿಗಾಗಿ
ಸ್ವ-ವ್ಯವಹಾರ ಮತ್ತು ಬ್ಯುಸಿನೆಸ್ ಅವಕಾಶ
ಹೆಮ್ಮೆಯ ಮತ್ತು ತೃಪ್ತಿದಾಯಕ ಜೀವನ ನಿಮ್ಮ ಮುಂದಿದೆ.. ಸ್ವತಂತ್ರ ಜೀವನ ಮತ್ತು ಆರ್ಥಿಕವಾಗಿ ಪ್ರಗತಿ ಹೊಂದಲು ನಿಮಗಿದು ಸ್ವಾಗತ..
ಉಚಿತ ಪ್ರವೇಶ
ನಿಗದಿತ ಆದಾಯ ಗಳಿಸಿ
ಇನ್ನೂ ಹಲವು ಅವಕಾಶಗಳು ಲಭ್ಯ
ಪಿ.ಎಫ್ ಮತ್ತು ಬೋನಸ್ ಸೌಲಭ್ಯ
ಸೀಮಿತ ಅವಕಾಶ
ವಯೋಮಿತಿ: 35 ವರ್ಷ ಮೇಲ್ಪಟ್ಟು
ಅನುಕೂಲಕರವಾದ ಸಮಯ
ದಿನಾಂಕ : 15-01-2021ನೇ ಶುಕ್ರವಾರ
ರಿಜಿಸ್ಟ್ರೇಷನ್: ಸಂಜೆ 4-15ರಿಂದ 4-30 ಪ್ರಸ್ತುತಪಡಿಸುವಿಕೆ : ಸಂಜೆ 4-30ಕ್ಕೆ
ಸ್ಥಳ : ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್, ಪಿ.ಬಿ. ರಸ್ತೆ, ದಾವಣಗೆರೆ.
ನೊಂದಾವಣೆಗಾಗಿ ಸಂಪರ್ಕಿಸಿ :
7353931682, 9619949819










JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte